# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಅಕ್ಟೋಬರ್ 13, 2021

ಸಂಪುಟ : 48 ಸಂಚಿಕೆ : 153 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಹಾನಗಲ್ ಚುನಾವಣೆಗಾಗಿ ನಗರದಲ್ಲಿ ಸಿಎಂ ತಂತ್ರಗಾರಿಕೆ

ದಾವಣಗೆರೆ, ಅ. 12 - ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿದಂತೆ ಉಂಟಾಗಿರುವ ಬಂಡಾಯ ಶಮನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ.

ಸೋಮವಾರ ರಾತ್ರಿ ನಗರಕ್ಕೆ ಆಗಮಿಸಿ, ಇಲ್ಲಿನ ಜಿ.ಎಂ.ಐ.ಟಿ. ಅತಿಥಿ ಗೃಹದಲ್ಲಿದ್ದ ಬೊಮ್ಮಾಯಿ, ಪಕ್ಷದ ಹಿರಿಯ ಮುಖಂಡರ ಜೊತೆ ಚರ್ಚೆ ನಡೆಸಿದ್ದರು. ಮಂಗಳವಾರ ಮುಂದುವರೆದ ಚರ್ಚೆಯಲ್ಲಿ ಸಚಿವರು, ಶಾಸಕರು, ಪಂಚಮಸಾಲಿ ಮುಖಂಡರಲ್ಲದೇ, ಸ್ವಾಮೀಜಿಗಳ ಜೊತೆಯೂ ಸಮಾಲೋಚನೆ ನಡೆಸಿದ್ದರು.

ಸಂಸದರಾದ ಜಿ.ಎಂ. ಸಿದ್ದೇಶ್ವರ, ಶಿವ ಕುಮಾರ ಉದಾಸಿ, ಸಚಿವರಾದ ಸುನಿಲ್ ಕುಮಾರ್, ಬಿ.ಸಿ. ಪಾಟೀಲ್, ಮುನಿರತ್ನ, ರಾಣೇಬೆನ್ನೂರು ಶಾಸಕ ಅರುಣಕುಮಾರ್ ಪೂಜಾರ್, ಹಾನಗಲ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಿವರಾಜ್ ಸಜ್ಜನ್, ಪಂಚಮಸಾಲಿ ಸಮಾಜದ ಮುಖಂಡರಾದ ಬಿ.ಸಿ. ಉಮಾಪತಿ, ಶಿಗ್ಗಾಂವ್‌ನ ಕುಮಾರೇಶ್ವರ ಪೀಠದ ಶ್ರೀ ಶಾಂತಲಿಂಗ ಸ್ವಾಮೀಜಿ ಮತ್ತಿತರರ ಜೊತೆ ಬೊಮ್ಮಾಯಿ ಸುದೀರ್ಘ ಚರ್ಚೆ ನಡೆಸಿದರು. ಹಾನಗಲ್‌ನಲ್ಲಿ (3ನೇ ಪುಟಕ್ಕೆ)



### ಉಪ ಚುನಾವಣೆಯಲ್ಲಿ ಗೆಲ್ಲುವ ಭರವಸೆ

ಚುನಾವಣಾ ತಂತ್ರಗಾರಿಕೆ ಸಭೆಯ ನಂತರ ಮಾತನಾಡಿರುವ ಬಿಜೆಪಿ ಮುಖಂಡರು ಹಾಗೂ ಸಚಿವರು, ಹಾನಗಲ್ ಹಾಗೂ ಸಿಂಧಗಿ ಎರಡೂ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಗೆಲ್ಲುವ ಭರವಸೆ ವ್ಯಕ್ತಪಡಿಸಿದ್ದಾರೆ. ಎರಡೂ ಕ್ಷೇತ್ರಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪ್ರತಿಷ್ಠೆಯ ಕಣಗಳಾಗಿವೆ. ಎರಡೂ ಕಡೆ ಬಿಜೆಪಿ ಗೆಲ್ಲಲಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ. ನಮ್ಮ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಎರಡೂ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಗೆದ್ದೇ (3ನೇ ಪುಟಕ್ಕೆ)

## ಗುತ್ತಿಗೆದಾರರ ಮೇಲಿನ ಐ.ಟಿ. ದಾಳಿಯಲ್ಲಿ 750 ಕೋಟಿ ರೂ. ಅಕ್ರಮ ಆದಾಯ ಪತ್ತೆ

ನವದೆಹಲಿ, ಅ. 12 – ಬೆಂಗಳೂರಿನ ಮೂವರು ಪ್ರಮುಖ ಗುತ್ತಿಗೆ ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದ ಆದಾಯ ತೆರಿಗೆ ಇಲಾಖೆ, 750 ಕೋಟಿ ರೂ.ಗಳ ಅಘೋಷಿತ ಆದಾಯ ಪತ್ತೆ ಮಾಡಿರುವುದಾಗಿ ತಿಳಿಸಿದೆ.

ನೀರಾವರಿ ಹಾಗೂ ಹೆದ್ದಾರಿ ವಲಯದಲ್ಲಿ ಗುತ್ತಿಗೆ ನಡೆಸುತ್ತಿದ್ದ ಗುತ್ತಿಗೆದಾರರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ನಿಕಟವರ್ತಿಗಳು ಎಂದು ಹೇಳಲಾಗಿತ್ತು. ಅದರಲ್ಲೂ ಉಮೇಶ್, ಯಡಿಯೂರಪ್ಪನವರ ಆಪ್ತ ಬಣದಲ್ಲಿ ಪ್ರಮುಖರಾಗಿದ್ದರು. ಇವರ ಮೇಲೆ ನಡೆಸಲಾದ ದಾಳಿ ಯಡಿಯೂರಪ್ಪನವರನ್ನು ಕಟ್ಟಿ ಹಾಕಲು ಹೈಕಮಾಂಡ್ ನಡೆಸಿದ ಯತ್ನ ಎಂಬ ಮಾತುಗಳೂ ರಾಜಕೀಯ ವಲಯದಲ್ಲಿ ಕೇಳಿ ಬಂದಿದ್ದವು.

ಅಕ್ಟೋಬರ್ 7ರಂದು ಈ ಗುತ್ತಿಗೆದಾರರಿಗೆ ಸೇರಿದ ನಾಲ್ಕು ರಾಜ್ಯಗಳ 47 ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು. ಈ ಮೂರೂ ಗುಂಪುಗಳು ಅಕ್ರಮ ಎಸಗಿದ್ದು ಕಂಡು ಬಂದಿದೆ ಎಂದು ಆದಾಯ ತೆರಿಗೆ ಇಲಾಖೆಯ ನೀತಿ ನಿರೂಪಕ ಸಂಸ್ಥೆಯಾದ ಸಿ.ಬಿ.ಡಿ.ಟಿ. (ಸೆಂಟ್ರಲ್ ಬ್ಯೂರೋ ಆಫ್ ಡೈರೆಕ್ಟ್ ಟ್ಯಾಕ್ಸಸ್) ತಿಳಿಸಿದೆ.

ಗುತ್ತಿಗೆ ಸಂಸ್ಥೆಗಳು ಬೋಗಸ್ ಖರೀದಿ, ಹೆಚ್ಚಿನ ದರದ ಕೂಲಿ ವೆಚ್ಚ, ಬೋಗಸ್ ಉಪ ಗುತ್ತಿಗೆ ವೆಚ್ಚ



ಮತ್ತಿತರೆ ಮಾರ್ಗಗಳ ಮೂಲಕ ತಮ್ಮ ಆದಾಯ ಮುಚ್ಚಿಡುತ್ತಿದ್ದವು ಎಂದು ಸಿ.ಬಿ.ಡಿ.ಟಿ. ಹೇಳಿದೆ.

ಗುತ್ತಿಗೆ ವ್ಯವಹಾರದ ಜೊತೆ ಯಾವುದೇ ಸಂಬಂಧ ಇರದ 40 ವ್ಯಕ್ತಿಗಳಿಗೆ ಗುತ್ತಿಗೆ ನೀಡಿರುವುದು ಕಂಡು ಬಂದಿದೆ ಎಂದು ಸಿ.ಬಿ.ಡಿ.ಟಿ. ಹೇಳಿದೆ.

ವ್ಯಕ್ತಿಗಳೂ ಸಹ ತಾವು ತಪ್ಪು ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಮೂರು ಗುಂಪುಗಳ ಶೋಧ ಹಾಗೂ ವಶ ಕಾರ್ಯಾಚರಣೆಯಲ್ಲಿ 750 ಕೋಟಿ ರೂ.ಗಳ ಅಘೋಷಿತ ಆದಾಯ ಪತ್ತೆಯಾಗಿದೆ ಎಂದು ಸಿ.ಬಿ.ಡಿ.ಟಿ. ಹೇಳಿದೆ.

ಈ ಪೈಕಿ ಒಂದು ಸಂಸ್ಥೆಯ ಅಘೋಷಿತ ಆದಾಯ 487 ಕೋಟಿ ರೂ. (3ನೇ ಪುಟಕ್ಕೆ)

## ಡಿಕೆಶಿಗಾಗಿ ಸಮೀಕ್ಷೆ ನಡೆಸುತ್ತಿದ್ದ ಕಚೇರಿ ಮೇಲೆ ಐ.ಟಿ. ದಾಳಿ

ಬೆಂಗಳೂರು, ಅ. 12- ಸಾಮಾಜಿಕ ಜಾಲತಾಣಗಳಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವರ್ಚಸ್ಸು ಹೆಚ್ಚಿಸುವ ಹಾಗೂ ಮುಂಬರುವ ವಿಧಾನಸಭಾ ಚುನಾವಣೆ ಕುರಿತು ಕ್ಷೇತ್ರ ಸಮೀಕ್ಷೆ ಮಾಡುತ್ತಿದ್ದ ಪಂಜಾಬ್ ಮೂಲದ ಡಿಸೈನ್ ಬಾಕ್ಸ್ ಕಚೇರಿ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶ ಪಡಿಸಿಕೊಂಡಿದ್ದಾರೆ.



ಸದಾಶಿವನಗರದ ಬಳ್ಳಾರಿ ರಸ್ತೆಯಲ್ಲಿರುವ ಕಚೇರಿ ಮೇಲೆ ಇಂದು ಬೆಳ್ಳಂ ಬೆಳಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳು ದಾಳಿ ನಡೆಸಿ ಕಚೇರಿ ಕಡತ, ಡಿಸೈನ್ ಬಾಕ್ಸ್‌ನ ಮಾಲಿಕರು ಹಾಗು ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಖಾಸಗಿ ಕಂಪನಿಯೊಂದರ ಮೂಲಕ ಶಿವಕುಮಾರ್ ಪಕ್ಷವನ್ನು ಹೈಜಾಕ್ ಮಾಡುತ್ತಿದ್ದಾರೆ ಹಾಗೂ ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳಲು ಪಕ್ಷವನ್ನು ಬಳಕೆ ಮಾಡಿಕೊಳ್ಳುವ ಜೊತೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹಿರಿಯರನ್ನು ಕಡೆಗಣಿಸಿ, ಯಾರನ್ನು ಅಭ್ಯರ್ಥಿ ಮಾಡಬೇಕೆಂಬ ಮಾಹಿತಿ ಕಲೆಹಾಕುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದವು. ಇದಾವುದಕ್ಕೂ ಕಿವಿಗೊಡದ ಶಿವಕುಮಾರ್, ಡಿಸೈನ್ ಬಾಕ್ಸ್ ಜೊತೆಗೆ ಮತ್ತೊಂದು ಸಂಸ್ಥೆಯಿಂದಲೂ ಸಮೀಕ್ಷೆ ನಡೆಸಲು (3ನೇ ಪುಟಕ್ಕೆ)

## 2-18 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ

ನವದೆಹಲಿ, ಅ. 12 – ಎರಡು ವರ್ಷ ದಿಂದ 18 ವರ್ಷದ ಮಕ್ಕಳಿಗೆ ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಲಸಿಕೆ ನೀಡಲು ಔಷಧ ನಿಯಂತ್ರಣ ಪ್ರಾಧಿಕಾರದ ಪರಿಣಿತರ ಸಮಿತಿ ಶಿಫಾರಸ್ಸು ಮಾಡಿದೆ.

ಕೆಲ ಷರತ್ತುಗಳೊಂದಿಗೆ ಈ ಲಸಿಕೆಗೆ ಒಪ್ಪಿಗೆ ನೀಡಲಾಗಿದೆ. ಈ ಹಿಂದೆ ಜೈಡಸ್ ಕ್ಯಾಡಿಲಾದ ಜೈಕೋವ್ - ಡಿ ಲಸಿಕೆಯನ್ನು ಮಕ್ಕಳಿಗೆ ನೀಡಲು ಶಿಫಾರಸ್ಸು ಮಾಡಲಾಗಿತ್ತು.

ಹೈದರಾಬಾದ್‌ನ ಭಾರತ್ ಬಯೋಟೆಕ್ ಕಂಪನಿಯು ಕೊರೊನಾದ ಕೊವ್ಯಾಕ್ಸಿನ್ ಲಸಿಕೆಯ 2/3 ಹಂತದ ಪ್ರಯೋಗ ಪೂರ್ಣಗೊಳಿಸಿದೆ. 2ರಿಂದ 18 ವರ್ಷದ ವರಿಗೆ ಲಸಿಕೆ ನೀಡುವ ಕುರಿತ ವರದಿಯನ್ನು ಕಂಪನಿಯು ಕೇಂದ್ರ ಔಷಧ ನಿಯಂತ್ರಕರ ಪರಿಶೀಲನೆಗೆ ಸಲ್ಲಿಸಿತ್ತು.

ಮಾಹಿತಿ ಪರಿಶೀಲನೆಯ ನಂತರ (3ನೇ ಪುಟಕ್ಕೆ)

## ರಸಗೊಬ್ಬರ : ಕೇಂದ್ರದಿಂದ 35 ಸಾವಿರ ಕೋ. ರೂ. ಸಬ್ಸಿಡಿ

ನವದೆಹಲಿ, ಅ. 12 – ಫಾಸ್ಫೇಟ್ ಹಾಗೂ ಪೊಟ್ಯಾಶ್ ಗೊಬ್ಬರಗಳಿಗೆ 28,655 ಕೋಟಿ ರೂ.ಗಳ ಸಬ್ಸಿಡಿ ನೀಡಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಇದು ಹಿಂಗಾರು ಬಿತ್ತನೆ ಸಂದರ್ಭದಲ್ಲಿ ಗೊಬ್ಬರದ ಬೆಲೆ ನಿಯಂತ್ರಣಕ್ಕೆ ನೆರವಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದರ ಜೊತೆಗೆ ಡಿಎಪಿ ಗೊಬ್ಬರಕ್ಕೆ ಹೆಚ್ಚುವರಿ ಸಬ್ಸಿಡಿಯಾಗಿ 5,716 ಕೋಟಿ ರೂ. ಕೊಡಲೂ ಸಹ ತೀರ್ಮಾನಿಸಲಾಗಿದೆ. ಒಟ್ಟಾರೆ ರಸಗೊಬ್ಬರದ ಸಬ್ಸಿಡಿ 35,115 ಕೋಟಿ ರೂ. ಆಗಲಿದೆ.

## 2 ಪಾಸಿಟಿವ್, 4 ಗುಣ

ದಾವಣಗೆರೆ, ಅ.12- ಜಿಲ್ಲೆಯ ದಾವಣ ಗೆರೆ ಹಾಗೂ ಚನ್ನಗಿರಿ ತಾಲ್ಲೂಕಿನ ತಲಾ ಒಬ್ಬರಲ್ಲಿ ಕೋವಿಡ್ ಸೋಂಕು ದೃಢಪಟ್ಟಿದೆ. ನಾಲ್ವರು ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ. ಜಿಲ್ಲೆಯಲ್ಲಿ 35 ಸಕ್ರಿಯ ಪ್ರಕರಣಗಳಿವೆ.





## ಭಾರೀ ಮಳೆಗೆ ಸಂಚಾರ ಅಸ್ತವ್ಯಸ್ತ

ದಾವಣಗೆರೆ, ಅ.12- ನಗರ ಹಾಗೂ ಸುತ್ತ ಮುತ್ತ ಮಂಗಳವಾರ ಸಂಜೆ ಮಿಂಚು-ಗುಡುಗು ಸಹಿತ ಭಾರೀ ಮಳೆ ಸುರಿಯಿತು.

ಸಂಜೆ ಸುಮಾರು 5.15ರ ವೇಳೆಗೆ ಆರಂಭವಾದ ಮಳೆ 6.45ರವರೆಗೂ ಧಾರಾಕಾರವಾಗಿ ಸುರಿಯಿತು. ನಂತರ ಕೆಲವೇ ನಿಮಿಷಗಳ ಬಿಡುವು ನೀಡಿ ಮತ್ತೆ ಆರಂಭವಾಯಿತು. ಮಳೆಯಿಂದಾಗಿ ನಗರದ ರಸ್ತೆಗಳಲ್ಲಿ ನೀರು ತುಂಬಿಕೊಂಡು ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಪಿ.ಬಿ. ರಸ್ತೆ ಸೇರಿದಂತೆ ಹಲವು ರಸ್ತೆಗಳಲ್ಲಿ ನೀರು ರಭಸವಾಗಿ ಹರಿಯತೊಡಗಿತ್ತು. ಎಪಿಎಂಸಿ ಮೇಲ್ಸೇತುವೆಯ ಎರಡೂ ಬದಿಗಳ ರಸ್ತೆಗಳಲ್ಲಿ ಎರಡು ಅಡಿಗಳಷ್ಟು ನೀರು ಹರಿಯುತ್ತಿತ್ತು. ಭಾರತ್ ಕಾಲೋನಿಯ ದೊಡ್ಡ ಚರಂಡಿ ತುಂಬಿ ರಸ್ತೆಯಲ್ಲಿ ರಭಸವಾಗಿ ನೀರು ಹರಿಯುತ್ತಿದ್ದ ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಶಂಕರ್ ವಿಹಾರ ಬಡಾವಣೆ, ನೀರಾವರಿ ಇಲಾಖೆಯ ಕ್ವಾರ್ಟ್ರಸ್‌ಗಳಲ್ಲಿ ನೀರು ತುಂಬಿಕೊಂಡಿತ್ತು. ಪಿ.ಬಿ. ರಸ್ತೆಯ ಅಗ್ನಿಶಾಮಕ ದಳದ ಕಛೇರಿ ಮುಂಭಾಗದ ರಸ್ತೆಯಲ್ಲಿ ನೀರು ಹೆಚ್ಚಾಗಿ ನಿಂತು. ಕೆಲ ಕಾಲ ವಾಹನ ಸವಾರರು ಪರದಾಡಬೇಕಾಯಿತು. ವಸಂತ ರಸ್ತೆಯ ರೈಲ್ವೇ ಕೆಳಸೇತುವೆ ಹಾಗೂ ಹೊಸ ಕೋರ್ಟ್ ರಸ್ತೆ ಬಳಿಯ ರೈಲ್ವೇ ಕೆಳಸೇತುವೆಯಲ್ಲಿ ನೀರು ತುಂಬಿಕೊಂಡಿತ್ತು. ಹಲವಾರು ಬಡಾವಣೆಗಳ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

## ಅರ್ಚಕರಿಗೆ 6ನೇ ವೇತನ ಆಯೋಗ ಜಾರಿ

ಬೆಂಗಳೂರು, ಅ. 12 - ಮುಜರಾಯಿ ಇಲಾಖೆಯ ದೇವಾಲಯಗಳ ಅರ್ಚಕರು ಹಾಗೂ ನೌಕರರಿಗೆ 6 ನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿಗೆ ಆದೇಶ ಹೊರಡಿಸಲಾಗಿದೆ ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಚಕರು ಹಾಗೂ ನೌಕರರು ಆರೋಗ್ಯ ಸಮಸ್ಯೆಗೆ ಒಳಗಾದರೆ ರಕ್ಷಣೆ ಒದಗಿಸಲು ವಿನೂತನ ವಿಮಾ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ಇದರಿಂದ ಮುಜರಾಯಿ ಇಲಾಖೆಯ

### ಮಕ್ಕಳ ಆರೋಗ್ಯಕ್ಕೆ ನಾಡಿದ್ದು ವಿಶೇಷ ಪೂಜೆ

ಸುಮಾರು 37,000 ಸಿಬ್ಬಂದಿಗೆ ಪ್ರಯೋಜನವಾಗಲಿದೆ.

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಈಗಾಗಲೇ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಹಾಗೂ ಅರ್ಚಕರಿಗೆ 6ನೇ ವೇತನ ಆಯೋಗದ ವೇತನ ದೊರಕಿಸಿಕೊಡುವಂತೆ ಬಹಳ ದಿನಗಳಿಂದ ಬೇಡಿಕೆ ಇತ್ತು.

ಈ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ತ್ವರಿತಗತಿಯಲ್ಲಿ ಅರ್ಚಕರಿಗೆ 6ನೇ ವೇತನ ಆಯೋಗದ ವೇತನ ನೀಡಲು ತೀರ್ಮಾನಿಸಲಾಯಿತು. ಇದಕ್ಕೆ 20 ಕೋಟಿ ರೂ. ವೆಚ್ಚವಾಗಲಿದ್ದು, ಆಯಾ ದೇವಸ್ಥಾನಗಳ ಆದಾಯದಿಂದ ಒದಗಿಸಲಾಗುವುದು, ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ ಎಂದರು.

ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ದೇವಸ್ಥಾನಗಳ ಆಸ್ತಿ, ಮಾರ್ಗ ನಕ್ಷೆ, ಸೇವೆಗಳ ಸಂಪೂರ್ಣ ಮಾಹಿತಿಯನ್ನು ಆನ್‌ಲೈನ್ ಮೂಲಕ (2ನೇ ಪುಟಕ್ಕೆ)

## ದೇವನಗರಿಯಲ್ಲಿ ಡೀಸೆಲ್ ಶತಕ

ದಾವಣಗೆರೆ, ಅ. 12 - ನಗರದಲ್ಲಿ ಲೀಟರ್ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದ ಕೆಲವೇ ದಿನಗಳಲ್ಲಿ ಡೀಸೆಲ್ ಬೆಲೆ ಸಹ ಶತಕದ ಗಡಿ ದಾಟಿದೆ. ನಗರದಲ್ಲೀಗ ಲೀಟರ್ ಡೀಸೆಲ್ ಬೆಲೆ 100.42 ರೂ.ಗಳಷ್ಟಾಗಿದೆ.

ವರ್ಷದ ಆರಂಭದಲ್ಲಿ ಲೀಟರ್‌ಗೆ 78 ರೂ.ಗಳಷ್ಟಿದ್ದ ಡೀಸೆಲ್ ದರ, ಅಕ್ಟೋಬರ್ ಆರಂಭದ ವೇಳೆಗೆ 95 ರೂ.ಗಳ ಹಂತಕ್ಕೆ ಬಂದಿತ್ತು. ಈಗ ಅ.11ರಂದು ಶತಕದ ಗಡಿ ದಾಟಿದೆ.

2020ರ ಜನವರಿಯಲ್ಲಿ ಡೀಸೆಲ್ ದರ ಲೀಟರ್‌ಗೆ 70 ರೂ.ಗಳ ಹಂತದಲ್ಲಿತ್ತು. 2021ರ ಜನವರಿಗೆ ಹೋಲಿಸಿದರೆ, ಅಕ್ಟೋಬರ್ ವೇಳೆಗೆ ಡೀಸೆಲ್ ದರ ಶೇ.22ರಷ್ಟು ಹೆಚ್ಚಾಗಿದೆ. ಮುಂದಿನ ದಿನಗಳಲ್ಲೂ ಡೀಸೆಲ್ ದರ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಸಾಕಷ್ಟು ಏರಿಳಿತ ಕಂಡಿದೆ. ಆದರೆ, ಬೆಲೆ ಇಳಿಕೆಯಾದಾಗ ಕೇಂದ್ರ (3ನೇ ಪುಟಕ್ಕೆ)

## ಒಣ ತ್ಯಾಜ್ಯದಿಂದ ಗೊಬ್ಬರ ನಗರ ಪಾಲಿಕೆಗೆ ಪ್ರಶಸ್ತಿ



ದಾವಣಗೆರೆ,ಅ.12- ಒಣ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುವಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯು ಕೈಗೊಂಡಿರುವ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಕರ್ನಾಟಕ ಸರ್ಕಾರದ ಪೌರಾಡಳಿತ ನಿರ್ದೇಶನಾಲಯವು ಉತ್ತಮ ಅಭ್ಯಾಸ ಪ್ರಶಸ್ತಿ ನೀಡುವುದರ ಮೂಲಕ ಗೌರವಿಸಿದೆ.

ಈ ಸಂಬಂಧ ಬೆಂಗಳೂರಿನ ವಿಧಾನ

### ಪ್ರಶಸ್ತಿ ಪಡೆದ ಆಯುಕ್ತ ವಿಶ್ವನಾಥ್ ಮುದಜ್ಜಿ

ಸೌಧದಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಪೌರಾಡಳಿತ ಖಾತೆ ಸಚಿವ ಎಂ.ಟಿ.ಬಿ. ನಾಗರಾಜ್ ಮತ್ತು ನಗರಾಭಿವೃದ್ಧಿ ಖಾತೆ ಸಚಿವ ಭೈರತಿ ಬಸವರಾಜ (2ನೇ ಪುಟಕ್ಕೆ)

## ರೈಲ್ವೇ ಕೆಳಸೇತುವೆ ನೀರಿನ ಸಮಸ್ಯೆಗೆ ಶೀಘ್ರ ಶಾಶ್ವತ ಪರಿಹಾರ

ದಾವಣಗೆರೆ ಹಳೆಯ ಹಾಗೂ ಹೊಸ ಭಾಗಗಳ ಸಂಚಾರ ಸಂಪರ್ಕದ ಮುಖ್ಯಪಾತ್ರ ಧಾರಿಯಾಗಿದ್ದ ರೈಲ್ವೇ ನಿಲ್ದಾಣದ ಪಕ್ಕದ ಅಂಡರ್ ಬ್ರಿಡ್ಜ್ ಸಮಸ್ಯೆಗೆ ಅಂತೂ ಇಂತೂ ಮುಕ್ತಿ ದೊರೆಯುವ ಕಾಲ ಸನ್ನಿಹಿತವಾಗಿದೆ.

ಕೇವಲ ಒಂದು ತಾಸು ಮಳೆ ಸುರಿದರೂ ಸಾಕಿತ್ತು. ಮೂರ್ನಾಲ್ಕು ಅಡಿಗಳಷ್ಟು ನೀರು ಈ ಕೆಳ ಸೇತುವೆಯಲ್ಲಿ ತುಂಬಿಕೊಂಡು ಸಂಚಾರ ಪೂರ್ತಿ ಅಸ್ತವ್ಯಸ್ತವಾಗುತ್ತಿತ್ತು. ದಾವಣಗೆರೆಯ ಹಳೆಯ ಭಾಗದಿಂದ ಹೊಸ ನಗರಕ್ಕೆ ಅಥವಾ ಹೊಸ ನಗರದಿಂದ ಹಳೇ ಭಾಗಕ್ಕೆ ತುರ್ತಾಗಿ ಹೋಗಬೇಕೆಂದರೆ ಸುತ್ತುವರೆದು ಹೋಗಬೇಕಿತ್ತು.

ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಬೇಕೆನ್ನುವುದು ನಗರದ ನಾಗರಿಕರ ಹಲವು ದಶಕಗಳ ಕನಸಾಗಿತ್ತು. ಆದರೆ ಇದೀಗ ಕನಸು ನನಸಾಗುವ ಹಂತದಲ್ಲಿದೆ. ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಅವರ ಮುತುವರ್ಜಿಯಿಂದ ಶಾಶ್ವತ ಕಾಮಗಾರಿ ಆರಂಭಗೊಂಡಿದೆ.




ಇನ್ನು ಮುಂದೆ ಮಳೆ ಬಂದರೆ ಕೆಳ ಸೇತುವೆಯಡಿ ನೀರು ನಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ. ಇದಕ್ಕಾಗಿ 10 ಹೆಚ್‌ಪಿ ಮೋಟರ್‌ಗಳು ಹಾಗೂ 3 ಸೆನ್ಸಾರ್ ಗಳನ್ನು ಅಳವಡಿಸಿದ್ದು, ನೀರು ತುಂಬಿದಾಕ್ಷಣ ಮೋಟರ್‌ಗಳು ಸ್ವಯಂ ಚಾಲಿತಗೊಳ್ಳಲಿವೆ.

ಮಂಡಿಪೇಟೆ ಬಳಿಯ ಈಗಾಗಲೇ ಸ್ಮಾರ್ಟ್ ಸಿಟಿ ಕಾಮಗಾರಿಯಡಿ ಮಾಡಲಾಗಿರುವ ಮುಖ್ಯ ಡ್ರೈನೇಜ್‌ಗೆ ನೀರು ಹರಿದು ಹೋಗಲಿದೆ. ಪ್ಲಾಸ್ಟಿಕ್ (3ನೇ ಪುಟಕ್ಕೆ)

> ಪಾಲಿಕೆ ಮುಂಭಾಗದ ರೈಲ್ವೇ ಕೆಳಸೇತುವೆಯ ಬಹುದಿನಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಉದ್ದೇಶಿಸಲಾಗಿದ್ದು, ಸುಮಾರು 50 ಲಕ್ಷ ರೂ. ವಚ್ಚದಲ್ಲಿ ಸೆನ್ಸಾರ್ ಮೋಟಾರ್‌ಗಳು, ಕೆಟಲ್ ಟ್ರ್ಯಾಪ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಇನ್ನು 15 ದಿನದೊಳಗೆ ಕಾಮಗಾರಿ ಮುಗಿದು ರಸ್ತೆ ಸಂಚಾರಕ್ಕೆ ಮುಕ್ತವಾಗಲಿದೆ.
>
> - ಎಸ್.ಟಿ. ವೀರೇಶ್,
> ಮೇಯರ್ ಮಹಾನಗರ ಪಾಲಿಕೆ


**ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,**
# 165/1-2, ಶ್ರೀವಾಸವಿ ರಸ್ತೆ, 3ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಪ್ರಕಟಣೆ**



**ಸದಸ್ಯ ಬಾಂಧವರ ಗಮನಕ್ಕೆ**

ಈ ಮೂಲಕ ಬ್ಯಾಂಕಿನ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಬ್ಯಾಂಕಿನ 53 ಮತ್ತು 54ನೇ ವಾರ್ಷಿಕ ಮಹಾಸಭೆಗಳಲ್ಲಿ ಕೈಗೊಂಡ ತೀರ್ಮಾನದ ರೀತ್ಯಾ ಶ್ರೀ ಸಿ.ಪಿ. ಸತೀಶ್‌ಕುಮಾರ್ ಬಿನ್ ಶ್ರೀ ಸಿ.ಎನ್. ಪ್ರಸನ್ನಕುಮಾರ್, ಸದಸ್ಯತ್ವ ಸಂಖ್ಯೆ 100071002143, # 769, 'ತೈಜಸ', ಪಿಂಜಾರಗಲ್ಲಿ, ಗಣೇಶ್ ಪೇಟೆ, ದಾವಣಗೆರೆ - 577 001 ಇವರ ಪ್ರಾಥಮಿಕ ಸದಸ್ಯತ್ವವನ್ನು 6 (ಆರು) ವರ್ಷಗಳ ಅವಧಿಗೆ ರದ್ದುಪಡಿಸಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಗಿದೆ.

ಆಡಳಿತ ಮಂಡಳಿಯ ತೀರ್ಮಾನದ ಮೇರೆಗೆ
ಸಹಿ/-
(ಪಡಗಲ್ ಪ್ರಶಾಂತ್)
ಪ್ರಧಾನ ವ್ಯವಸ್ಥಾಪಕರು,
ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ., ಪ್ರಧಾನ ಕಛೇರಿ, ದಾವಣಗೆರೆ.

ದಿನಾಂಕ : 12-10-2021
ದಾವಣಗೆರೆ.

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 40x70 ಅಳತೆ ಸೈಟ್ ಮಾರಾಟಕ್ಕಿದೆ ಮತ್ತು 8500sqft ಅಳತೆಯ ಬ್ಯಾಂಕ್, ಸೂಪರ್ ಮಾರ್ಕೆಟ್, ಗೋಡೌನ್ ಮತ್ತಿತರೆ ಉಪಯೋಗಕ್ಕೆ ಅನುಕೂಲವಾದ ಜಾಗ ನೆಲ ಬಾಡಿಗೆಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
**91081 81864**

**ವಾಟರ್ ಪ್ರೂಫಿಂಗ್ (ಮನೆಯ ನೀರು ಸೋರುವಿಕೆಗೆ)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
ದಾವಣಗೆರೆ.

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
**94814 52642**

**ಹೆಲ್ಪರ್ಸ್ ಬೇಕಾಗಿದ್ದಾರೆ**
ಜನತಾವಾಣಿ ಪತ್ರಿಕೆಯಲ್ಲಿ ಪ್ರಿಂಟಿಂಗ್ ವಿಭಾಗದಲ್ಲಿ ಹೆಲ್ಪರ್ ಆಗಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಆಸಕ್ತರು ಬೆಳಗ್ಗೆ 11.30 ನಂತರ ಸಂಪರ್ಕಿಸಿ
ಫೋನ್ : 08192 254736

**ಬೇಕಾಗಿದ್ದಾರೆ**
ಪ್ರತಿಷ್ಠಿತ ಎಲಿಮೆಂಟ್ಸ್ ಬಾರ್ & ರೆಸ್ಟೋರೆಂಟ್ ದಾವಣಗೆರೆಯಲ್ಲಿ ಕೆಲಸ ಮಾಡಲು ಕ್ಯಾಪ್ಟನ್, ವೆಂಡರ್, ವೇಟರ್ಸ್ ಹಾಗೂ ಸಪ್ಲಯರ್ಸ್ ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ಸಂಬಳ ಕೊಡಲಾಗುವುದು
ಸಂಪರ್ಕಿಸಿ: 98806 65959, 96060 96695 93809 74740, 98862 11600

**WANTED**
Girls required for data entry with accounts knowledge at Food Mart Supermarket, MCC 'B' Block, Davangere.
Quali : B.Com
Mob: 9886463531

**ಸೈಟು ಮಾರಾಟಕ್ಕಿದೆ**
ನಗರದ ಎಂ.ಸಿ.ಸಿ.'ಬಿ' ಬ್ಲಾಕ್ ನ ಬಾಪೂಜಿ ಹೈಸ್ಕೂಲ್ ಪಕ್ಕದಲ್ಲಿ ಹಾದುಹೋಗುವ 21ನೇ ಮುಖ್ಯ ರಸ್ತೆಗೆ 40x60 ಅಡಿ ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ.ಆಸಕ್ತರು ನೇರವಾಗಿ ಸಂಪರ್ಕಿಸಿ :
Mohan Real Estate Agencies
Mob : 97424 34049

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ-1 ಬೇಕಾಗಿದ್ದಾರೆ. (ವಸತಿ ವ್ಯವಸ್ಥೆ ಇರುತ್ತದೆ) ಸಂಪರ್ಕಿಸಿ :
86186 42929
08192-252228

**ಮಾರಾಟಕ್ಕೆ**
ವಿದ್ಯಾನಗರ ಸೈಟ್(ದಕ್ಷಿಣ) 40×60, ನಿಜಲಿಂಗಪ್ಪ ಬಡಾವಣೆ ಸೈಟ್ (ದಕ್ಷಿಣ)40×60, ತರಳಬಾಳು ಬಡಾವಣೆ ಸೈಟ್(ದಕ್ಷಿಣ) 30×50, SS ಲೇಔಟ್ ಸೈಟ್ - 40×63, ಮಹಾಲಕ್ಷ್ಮಿ ಲೇಔಟ್ ಸೈಟ್( ಉತ್ತಮ್ ಚಂದ್ - ಪಶ್ಚಿಮ) 35×61, ಶಿಕ್ಷಕರ ಬಡಾವಣೆ 2 ನೇ ಹಂತ (ದಕ್ಷಿಣ- ಆವರಗೆರೆ ) 30×40
78996 36597, 99165 25828

**ಬೇಕಾಗಿದ್ದಾರೆ**
20 Ltr ವಾಟರ್ ಕ್ಯಾನ್ ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
97318 91077

**ಬೇಕಾಗಿದ್ದಾರೆ**
ದಾವಣಗೆರೆ ಹದಡಿ ರಸ್ತೆಯಲ್ಲಿನ **ಉದಯ ಸೂಪರ್ ಬಜಾರ್** ನಲ್ಲಿ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ
90198 59823

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರೋಡ್, ದಾವಣಗೆರೆ

**ಮನೆ ಬಾಡಿಗೆಗಿದೆ**
ಹೊಸ ಬನಶಂಕರಿ ಬಡಾವಣೆ (ಬೈಪಾಸ್ ಪಕ್ಕ) D.No. 5, ವಾಸ್ತು ಪ್ರಕಾರ, ಪೂರ್ವದ ಬಾಗಿಲು, 2 ಬೆಡ್‌ರೂಂ ಇರುವ ಹೊಸ ಮನೆ ಬಾಡಿಗೆಗಿದೆ.
86607 37365, 99863 71175

**REQUIRE 3 BHK FOR LEASE**
Required 3 BHK for Dance, Music & Educational classes. Preferable area: MCC B Block, MCC A Block, P.J Extn, Vidyanagar. Kindly contact :
+91 6360 993 735

**ಬೇಕಾಗಿದ್ದಾರೆ**
ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. BIO DATA ಜೊತೆ ಸಂಪರ್ಕಿಸಿ: Sanjay
94807 77622

**ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. 11ನೇ ಮೇನ್, 5ನೇ ಕ್ರಾಸ್ ಎಂ.ಸಿ.ಸಿ. 'ಬಿ' ಬ್ಲಾಕ್, ಭವಾನಿ ಹಿಟ್ಟಿನ ಗಿರಣಿ ಹತ್ತಿರ ದಾವಣಗೆರೆ-577004
83100 76813
90363 76232

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ :
**ಕಾವೇರಿ ಮೆಡಿಹೌಸ್ ಪ್ರೈ.ಲಿ.**
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**ಅಕೌಂಟೆಂಟ್ ಕಂ ಕಾರ್ ಡ್ರೈವರ್ ಬೇಕಾಗಿದ್ದಾರೆ**
ಬಿ.ಕಾಂ. ಆದವರಿಗೆ ಮತ್ತು ಡ್ರೈವಿಂಗ್‌ನಲ್ಲಿ ಅನುಭವವುಳ್ಳರಿಗೆ ಆದ್ಯತೆ. ಸಂಪರ್ಕಿಸಿ :
**ಚಿಂದೋಡಿ ಲೀಲಾ**
ಮೆಮೋರಿಯಲ್ ಹಾಲ್, ಆವರಗೆರೆ
90190 94446

**ಮನೆ ಖರೀದಿಗೆ ಮತ್ತು ಲೀಸ್‌ಗಿದೆ**
ಭಗತ್‌ಸಿಂಗ್ ನಗರ, ಮಸೀದಿ ಪಕ್ಕ. ಸಂಪರ್ಕಿಸಿ: **ಶಹಬುದ್ದೀನ್**
74119 88337
77958 98578

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
**ಮಾನಸ ಎಜುಕೇಷನ್ ಟ್ರಸ್ಟ್(ರಿ.)**
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**SHOPS FOR RENT**
With wash room facility. N.R Road Davangere.
94483 69523

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ. ವಯಸ್ಸು 18 ವರ್ಷ ಮೇಲ್ಪಟ್ಟು, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮಿ ಲೇಔಟ್, ದಾವಣಗೆರೆ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 90080 67049

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ನಗರದ B.I.E.T. ರಸ್ತೆಗೆ, ಹೇಮಾವತಿ ಹಾಸ್ಟೆಲ್ ಎದುರು ಒಟ್ಟು 3200 ಅಡಿ ಇರುವ ಕಾರ್ನರ್ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ.
Mohan Real Estate Agencies
97424 34049

**FOR RENT**
2 BHK house at 2nd Floor, No 1868/14P, 7th main, Mahesh P.U College Road, Vivekananda Badavane, Davangere.
97432 43564

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266


# ಬಾಲ್ಯವಿವಾಹಗಳಿಂದ ಹೆಣ್ಣುಮಕ್ಕಳ ಭವಿಷ್ಯ ನಾಶ

## ಜಗಳೂರು : ಕಾನೂನು ಜಾಗೃತಿ ಕಾರ್ಯಕ್ರಮದಲ್ಲಿ ನ್ಯಾ. ಜಿ. ತಿಮ್ಮಯ್ಯ ಕಳವಳ



ಜಗಳೂರು, ಅ.12- ಬಡ ಕುಟುಂಬಗಳಲ್ಲಿ ಅವ್ಯಾಹತವಾಗಿ ಬಾಲ್ಯವಿವಾಹಗಳು ನಡೆಯುತ್ತಿರುವುದು ನೋವಿನ ಸಂಗತಿಯಾಗಿದ್ದು, ಇದರಿಂದ ಹೆಣ್ಣುಮಕ್ಕಳ ಭವಿಷ್ಯ ನಾಶವಾಗಿ, ಕನಸುಗಳು ಕಮರಿಹೋಗುತ್ತಿವೆ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಜಿ. ತಿಮ್ಮಯ್ಯ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ವಕೀಲರ ಸಂಘ ಹಾಗೂ ಸಮಾಜಕಲ್ಯಾಣ ಇಲಾಖೆ ಇವರುಗಳ ಸಹಯೋಗದೊಂದಿಗೆ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ಪ್ಯಾನ್ ಇಂಡಿಯಾ ಜಾಗೃತಿ ಅಭಿಯಾನ ಕಾರ್ಯಕ್ರಮದಡಿ 'ದತ್ತು ಮತ್ತು ನಿರ್ವಹಣೆಗೆ' ಸಂಬಂಧಿಸಿದ ಕಾನೂನು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಣ್ಣು, ವಿದ್ಯಾವಂತಳಾಗಿ ಪ್ರಜ್ಞಾವಂತಿಕೆ ಯಿಂದ ದೌರ್ಜನ್ಯ, ಅತ್ಯಾಚಾರಗಳ ವಿರುದ್ಧ ಸ್ವಯಂ ಪ್ರತಿರೋಧ ವ್ಯಕ್ತ ಪಡಿಸಿದಲ್ಲಿ ಸಮಾಜ ದಲ್ಲಿ ಹೆಣ್ಣಿನ ಮೇಲೆ ನಡೆಯುವ ದುಷ್ಕೃತ್ಯ ಗಳನ್ನು ಕೊನೆಗಾಣಿಸಬಹುದು. ಕೇವಲ ಭಾಷಣ, ಭಿತ್ತಿ ಚಿತ್ರಗಳಿಂದ ಸಾಧ್ಯವಿಲ್ಲ ಎಂದರು.

ಪದವಿ ಹಂತದಲ್ಲಿ ಯುವಕ, ಯುವತಿಯರಿಗೆ ಪ್ರಜ್ಞಾವಂತಿಕೆ ಇರುತ್ತದೆ. ಸಮಾಜದ ವ್ಯವಸ್ಥೆಯ ಹಲವು ಸಮಸ್ಯೆಗಳಿಗೆ ಕಾನೂನು ಮೂಲಕ ನ್ಯಾಯ ಸಿಗುತ್ತದೆ ಎಂಬ ಜ್ಞಾನ ನಿಮ್ಮಲ್ಲಿ ಇರುವುದರಿಂದ ನೀವುಗಳು ಮೊದಲು ಕಾನೂನು, ನೀತಿ, ನಿಯಮಗಳನ್ನು ತಿಳಿದುಕೊಂಡು ಪೋಷಕರಿಗೆ ಹಾಗು ಗ್ರಾಮದ ಸುತ್ತ ಮುತ್ತಲಿನ ನಾಗರಿಕರಿಗೆ ತಿಳಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮಹಾತ್ಮ ಗಾಂಧೀಜಿ ಅವರ ಜನ್ಮದಿನದಂದ ಪ್ರಾರಂಭವಾದ ಈ ಅಭಿಯಾನ ನವಂಬರ್ 14 ರಂದು ಮುಗಿಯುತ್ತದೆ. ಎಲ್ಲಾ ವರ್ಗಗಳ ಜನರಿಗೆ ಸಾಧ್ಯವಾದಷ್ಟು ಕಾನೂನು ಅರಿವು ಮೂಡಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ. ನಮ್ಮ ದೇಶದ ಸಂವಿಧಾನ ಮತ್ತು ಕಾನೂನುಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳುವುದು ಅವಶ್ಯಕ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕಾನೂನು ಅರಿವು ಪಡೆದರೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾ ಗುವಿಕೆಯನ್ನು ತಪ್ಪಿಸಬಹುದು ಎಂದರು.

ವಕೀಲರ ಸಂಘದ ಕಾರ್ಯದರ್ಶಿ ತಿಪ್ಪೇ ಸ್ವಾಮಿ, ಹಿರಿಯ ವಕೀಲ ಎಸ್.ಐ. ಕುಂಬಾರ್ ಮತ್ತು ಪಂಪಣ್ಣ ಉಪನ್ಯಾಸ ನೀಡಿದರು. ಸರ್ಕಾರಿ ಸಹಾಯಕ ಅಭಿ ಯೋಜಕಿ ಡಿ. ರೂಪ, ವಕೀಲರ ಸಂಘದ ಅಧ್ಯಕ್ಷ ಬಸವ ರಾಜಪ್ಪ, ವಕೀಲರಾದ ಪಂಪಣ್ಣ, ಬಸವ ರಾಜಪ್ಪ, ರುದ್ರೇಶ್, ಕರಿಬಸಪ್ಪ, ಜ್ಯೋತಿ, ನಾಗರತ್ನಮ್ಮ, ಕರಿ ಬಸಯ್ಯ, ವಸತಿ ನಿಲಯದ ಮೇಲ್ವಿ ಚಾರಕರಾದ ಮಹಾಬಲೇಶ್, ಮಂಗಳ, ನೇತ್ರಾವತಿ ಇನ್ನಿತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಲಸಿಕೆ ಹಾಕಿಸಿಕೊಳ್ಳುವಂತೆ ಕರೆ

**ಹರಿಹರ**


ಹರಿಹರ, ಅ.12- ಸರ್ಕಾರ ಅ.10 ರಿಂದ 14 ರವರೆಗೆ ರಾಜ್ಯಾದ್ಯಂತ ಲಸಿಕಾ ಮೇಳವನ್ನು ಆಯೋಜಿಸಿದ್ದು, ತಾಲ್ಲೂಕಿನ ಶಿಕ್ಷಕರು ಸಾರ್ವಜನಿಕರಿಗೆ ದೂರವಾಣಿ ಕರೆ ಮಾಡಿ, ಲಸಿಕೆ ಹಾಕಿಸಿಕೊಳ್ಳುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಪೌರಾಯುಕ್ತೆ ಎಸ್. ಲಕ್ಷ್ಮಿ, ನಗರಸಭೆ ಸಿಬ್ಬಂದಿ ತಿಪ್ಪೇಸ್ವಾಮಿ, ಶಿಕ್ಷಕರಾದ ಗದಿಗೆಪ್ಪ, ಅವಿತ್, ಕುಬೇರಪ್ಪ ಗುಡಿಹಳ್ಳಿ, ಸುರೇಶ್ ಹೆಚ್. ಬೆಳ್ಳೂಡಿ, ರೇಖಾ ಟಿ. ತಳವಾರ ಕೇರಿ, ಶ್ರೀನಿವಾಸ್ ರೆಡ್ಡಿ ಜಿಗಳಿ, ಮೃತ್ಯುಂಜಯ, ಮಾಚಿ ಗೌಡ್ರು, ಜಮಾಲುದ್ದೀನ್ ಸಾರಥಿ, ರಜಿಯಾ ಕರಲಹಳ್ಳಿ, ಚಂದ್ರಪ್ಪ, ಮೋಹನ್ ಆಚಾರ್ ಇನ್ನಿತರರಿದ್ದರು.

# ಅರ್ಚಕರಿಗೆ 6ನೇ ವೇತನ ಆಯೋಗ

**(1ನೇ ಪುಟದಿಂದ)** ತಿಳಿದುಕೊಳ್ಳಲು ಐಟಿಎಂಎಸ್ (ಇಂಟಿಗ್ರೇಟೆಡ್ ಡೆವೆಲಪ್‌ಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ಜಾರಿಗೆ ತೀರ್ಮಾನಿಸಲಾಗಿದೆ.

ವಿಶ್ವದಲ್ಲಿ ಕೊರೊನಾ ಸೋಂಕಿನ ಎರಡು ಅಲೆಗಳಿಂದ ಸಾಕಷ್ಟು ಜನರ ಜೀವ ಹಾನಿಯಾಗಿದೆ, ಇಲಾಖೆ ವ್ಯಾಪ್ತಿಯ ಎಲ್ಲ ದೇವಸ್ಥಾನಗಳಲ್ಲಿ ವಿಜಯದಶಮಿ ಹಬ್ಬದ ಪ್ರಯುಕ್ತ ಅಕ್ಟೋಬರ್ 15 ರಂದು ಮಕ್ಕಳ ಆರೋಗ್ಯ ರಕ್ಷಣೆಗಾಗಿ ಪ್ರಾರ್ಥಿಸಲು ವಿಶೇಷ ಪೂಜೆ ಸಲ್ಲಿಸಲು ಸುತ್ತೋಲೆ ಹೊರಡಿಸಲಾಗಿದೆ ಎಂದರು.

# ಗಾಂಧಿನಗರದ ಶ್ರೀ ಹೊರಟ್ಟಿ ದುರ್ಗಾಂಬಿಕ, ಚೌಡೇಶ್ವರಿ ದೇವಸ್ಥಾನದಲ್ಲಿ ದಸರಾ ಉತ್ಸವ



ದಾವಣಗೆರೆ, ಅ.12 - ಇಲ್ಲಿನ ಗಾಂಧಿನಗರದ 5ನೇ ಕ್ರಾಸ್‌ನಲ್ಲಿರುವ ಶ್ರೀ ಹೊರಟ್ಟಿ ದುರ್ಗಾಂಬಿಕ ಹಾಗೂ ಶ್ರೀ ಮಲ್ಲಾಡಿ ಚೌಡೇಶ್ವರಿ ದೇವಸ್ಥಾನದಲ್ಲಿ ದಸರಾ ಉತ್ಸವ ನಡೆಯುತ್ತಿದೆ.

ನಾಡ ಹಬ್ಬದ ಪ್ರಯುಕ್ತ ದೇವಸ್ಥಾನದಲ್ಲಿ ಶ್ರೀ ದೇವಿಗೆ ವಿಶೇಷ ಪೂಜೆ, ಅಲಂಕಾರ, ಪ್ರತಿದಿನ ಸಂಜೆ ಪುರಾಣ ನಡೆಸಲಾಗುತ್ತಿದೆ ಎಂದು ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಎಂ. ಈಶ್ವರಪ್ಪ ತಿಳಿಸಿದ್ದಾರೆ.

ಉತ್ಸವದಲ್ಲಿ ಟ್ರಸ್ಟ್ ಗೌರವಾಧ್ಯಕ್ಷ ಎನ್.ನೀಲಗಿ ರಿಯಪ್ಪ, ಗೌರವಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಎನ್. ವಾಸುದೇವ, ಬಿ.ಎಂ. ರಾಮ ಸ್ವಾಮಿ, ಪಿ. ಹನುಮಂತಪ್ಪ ಮತ್ತಿತರರು ಪಾಲ್ಗೊಂಡಿದ್ದಾರೆ.

### ನವದುರ್ಗೆಯರ ಏಳನೇ ರೂಪ

## ಕಾಳರಾತ್ರಿ ದೇವಿ

ಭೀಕರಿ ಭಯಂಕರಿ ಕಾಳರಾತ್ರಾ ದೇವಿ
ಶಕ್ತಿ ಸಂಪೂರ್ಣೆಗೆ ಬಾಗಿ ನಮಿಪೆ
ರಕ್ತ ಬೀಜಾಸುರನ ರಕ್ತ ಹೀರಿದ ದೇವಿ
ರಕ್ತಿ ವಿರಕ್ತಿಗಳ ನೀಡು ತಾಯೆ

ಕಗ್ಗತ್ತಲಿನಂತೆ ಕಪ್ಪು ವರ್ಣದ ದೇವಿ
ಜಗದ ತಾಮಸರನ್ನು ಕೊಲ್ಲುವವಳೆ
ಜಗ್ಗದ ದೈತ್ಯರ ಹುಟ್ಟಡಗಿಸುವವಳೆ
ಜಗದಂಬೆಯೆ ಗಾರ್ಧಬವಾಹನಳೆ

ಅರಳಿದ ಕಂಗಳಲಿ ಕ್ರೋಧ ತುಂಬಿ
ದುರುಳರಿಗೆ ಕಾಲಕಾಲಳು ನೀನಮ್ಮ
ಪರಮಶಿವೆ ಶುಂಭ ನಿಶುಂಭ ಸಂಹಾರಿಣಿ
ನಿರುತ ಭಕ್ತರ ಕಾಯ್ವ ಕರುಣಾಮಯಿ

ರೋಗ, ಕತ್ತಲು, ಕಷ್ಟ ಭಯ ನಿವಾರಕಿಯೆ
ಅಗಣಿತ ಶಕ್ತಿಳೆ ಕಾಳಿ ಕರಾಳಿಯೆ
ಭಗವತಿ ನಿನ್ನಡಿಲಿ ಬಿದ್ದಿರುವೆನಮ್ಮ
ಬೇಗ ಸಲಹಮ್ಮ ಸಿರಿಹರಿ ಸೋದರಿ

**- ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್**


**ಮಳಿಗೆ ಬಾಡಿಗೆಗೆ ಇದೆ**
ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, 'ಅವಾಂತರ' ಪತ್ರಿಕೆ ಕಾರ್ಯಾಲಯದ ಪಕ್ಕದಲ್ಲಿನ ಕಮರ್ಷಿಯಲ್ ಬಿಲ್ಡಿಂಗ್‌ನಲ್ಲಿ 20×15 ಅಳತೆಯ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94480 53519

**GENERATOR FOR SALE**
25KV Diesel, Single phase, Kirloskar make running in good condition.
Contact: Rangamahal
94484 65800

**ಸುವರ್ಣ ಅವಕಾಶ**
MBBS ಅತ್ಯಂತ ಕಡಿಮೆ ಫೀನಲ್ಲಿ ವಿದೇಶಗಳಲ್ಲಿ ಓದಿ ಡಾಕ್ಟರ್ ಆಗುವ ಸುವರ್ಣ ಅವಕಾಶ. ವಿದ್ಯಾರ್ಹತೆ: PUC Science. ಕೂಡಲೇ ಸಂಪರ್ಕಿಸಿ:
**ಗಂಗೋತ್ರಿ ಎಜ್ಯುಕೇಷನ್ ಟ್ರಸ್ಟ್**
ಲಾಯರ್ ರೋಡ್, ದಾವವಣಗೆರೆ.
86602 35013

**ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. 11ನೇ ಮೇನ್, 5ನೇ ಕ್ರಾಸ್ ಎಂ.ಸಿ.ಸಿ. 'ಬಿ' ಬ್ಲಾಕ್, ಭವಾನಿ ಹಿಟ್ಟಿನ ಗಿರಣಿ ಹತ್ತಿರ ದಾವಣಗೆರೆ-577004
83100 76813
90363 76232

**WANTED**
Tele Callers, Data Entry, Executives, SSLC/PUC Fluency in English for outbond Process.
Timing: 10.00am to 5.00 pm
Contact: 83106 28910

**WANTED**
Boys and Girls for shop.
**Shah Opticals**
P.J Extension, Opp Drusthi Eye Hospital, Near Vishveshwaraya park, Davangere.


# ತ್ಯಾಜ್ಯದಿಂದ ಗೊಬ್ಬರ : ಮಹಾಪಾಲಿಕೆಗೆ ಪ್ರಶಸ್ತಿ

**(1ನೇ ಪುಟದಿಂದ)** ಅವರುಗಳು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪೌರಾಡಳಿತ ಇಲಾಖೆಯ ನಿರ್ದೇಶಕರಾದ ಕಾವೇರಿ ಮತ್ತು ಇತರೆ ಗಣ್ಯರು ಉಪಸ್ಥಿತರಿದ್ದರು.

ಒಣ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಮಾಡುವಲ್ಲಿ ನಿರ್ವಹಿಸಿದ ಮಾದರಿ ಬಗ್ಗೆ ಶ್ಲಾಘಿಸಿರುವ ಪೌರಾಡಳಿತ ನಿರ್ದೇಶನಾಲಯವು ರಾಜ್ಯದ 20 ನಗರ ಪಾಲಿಕೆ ಮತ್ತು ನಗರ ಸಭೆಗಳಿಗೆ ಉತ್ತಮ ಅಭ್ಯಾಸ ಪ್ರಶಸ್ತಿ ಪ್ರಶಸ್ತಿ ನೀಡಿದ್ದು, ಆ ಪೈಕಿ ದಾವಣಗೆರೆ ನಗರ ಪಾಲಿಕೆ ಪ್ರಶಸ್ತಿಯೂ ಒಂದು. ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿನ ಒಣ ತ್ಯಾಜ್ಯವನ್ನು ವಿಲೇವಾರಿ ಮಾಡುವುದರ ಜೊತೆಗೆ ಗೊಬ್ಬರವನ್ನಾಗಿ ರೂಪಿಸುವಲ್ಲಿ ಕಳೆದ ಸುಮಾರು ಒಂದೂವರೆ ವರ್ಷಗಳಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಸಲ್ಲಿಸಿದ ವರದಿಯನ್ವಯ ಪೌರಾಡಳಿತ ನಿರ್ದೇಶನಾಲಯವು ಪ್ರಶಸ್ತಿಗೆ ಆಯ್ಕೆ ಮಾಡಿದೆ.

# ವ್ಯವಹಾರಕ್ಕೆ ಸಾಲದ ನೆಪ : ಕಿರಾಣಿ ವ್ಯಾಪಾರಿಗೆ ವಂಚನೆ

ದಾವಣಗೆರೆ, ಅ.12- ಫೈನಾನ್ಸ್ ಕಂಪನಿಯ ಅಧಿ ಕಾರಿ ಸೋಗಿನಲ್ಲಿ ವ್ಯವಹಾರಕ್ಕೆ ಸಾಲ ಕೊಡುವುದಾಗಿ ನಂಬಿಸಿ, ಕಿರಾಣಿ ಅಂಗಡಿ ವ್ಯಾಪಾರಿಯೋರ್ವರಿಗೆ ಲಕ್ಷಕ್ಕೂ ಅಧಿಕ ಹಣ ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳೀಯ ವಿದ್ಯಾನಗರದ ಎಸ್.ಆರ್. ಉಮಾಶಂಕರ್ ಮೋಸ ಹೋದ ಕಿರಾಣಿ ಅಂಗಡಿ ವ್ಯಾಪಾರಿ.

ದೈನಂದಿನ ವ್ಯವಹಾರಕ್ಕಾಗಿ ಐಡಿಬಿಐ ಬ್ಯಾಂಕ್ ನಲ್ಲಿ ಉಳಿತಾಯ ಖಾತೆ ಹೊಂದಿದ್ದು, ಖಾತೆಗೆ ಆನ್ ಲೈನ್ ಲಿಂಕ್ ಮಾಡಿಸಿದ್ದಾರೆ.

ಈತನನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದ ಅಪರಿಚಿತನು ಹಿಂದಿ ಭಾಷೆಯಲ್ಲಿ ಮಾತನಾಡಿ ತಾನು ಬಜಾಜ್ ಫೈನಾನ್ಸ್ ಕಂಪನಿ ಅಧಿಕಾರಿಯೆಂದು ಪರಿಚಯ ಮಾಡಿಕೊಂಡು 2 ಲಕ್ಷ ಹಣವನ್ನು ವ್ಯಾಪಾರಕ್ಕಾಗಿ ಸಾಲ ನೀಡುವುದಾಗಿ ನಂಬಿಸಿ ವಂಚಿಸಿದ್ದಾನೆ ಎಂದು ದೂರಲಾಗಿದೆ.

## ಪ್ರಥಮ ವರ್ಷದ ಸವಿ ನೆನಪು



**ದಿ|| ತಿಮ್ಲಾಪುರದ ಶ್ರೀಮತಿ ಸಿದ್ದಮ್ಮ**
(ದಿ|| ತಿಮ್ಲಾಪುರದ ಸಿದ್ದಪ್ಪನವರು, ಮಾಜಿ ಛೇರ್ಮನ್, ಯಕ್ಕನಹಳ್ಳಿ, ಹೊನ್ನಾಳಿ ತಾ, ಇವರ ಧರ್ಮಪತ್ನಿ)


ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು,
ನಿಮ್ಮ ನೆನಪುಗಳೇ ನಮಗೆ ದಾರಿ ದೀಪ, ನೀವು ಹಾಕಿಕೊಟ್ಟ ಮಾರ್ಗದಲ್ಲೇ
ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸವಿ ನೆನಪಿನಲ್ಲಿರುವ,

- ದಿ|| ಶ್ರೀಮತಿ ಸುಶೀಲಮ್ಮ ಶ್ರೀ ಟಿ. ಬಸವರಾಜಪ್ಪ, ಜಿ.ಪಂ. ಸದಸ್ಯರು
- ಶ್ರೀಮತಿ ಸುನಂದ ಶ್ರೀ ಟಿ.ಎಸ್. ಮಹೇಶ್ವರಪ್ಪ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಚಿತ್ರದುರ್ಗ.
- ಶ್ರೀಮತಿ ಸುಮ ಶ್ರೀ ಟಿ. ಚಂದ್ರಪ್ಪ, ಪ್ರೊಫೆಸರ್ ಮತ್ತು ಹೆಚ್‌ಓಡಿ, ಎಸ್.ಟಿ.ಜೆ.ಐ.ಟಿ., ರಾಣೇಬೆನ್ನೂರು.
- ಶ್ರೀಮತಿ ಶಶಿಕಲಾ ಶ್ರೀ ಟಿ. ಲೋಕೇಶಪ್ಪ
- ಶ್ರೀಮತಿ ದೀಪಾ ಶ್ರೀ ಟಿ.ಎಸ್. ಜಗದೀಶ್, ಮಾಜಿ ಅಧ್ಯಕ್ಷರು, ಜಿ.ಪಂ.ದಾವಣಗೆರೆ.
- ಶ್ರೀಮತಿ ಯಶೋಧ ಶ್ರೀ ಟಿ.ಎಸ್. ಯೋಗೇಶಪ್ಪ
- ಶ್ರೀಮತಿ ಶಶಿಕಲಾ ಶ್ರೀ ಟಿ.ಎಸ್. ಅಶೋಕ, ಮಾಜಿ ಸದಸ್ಯರು, ಗ್ರಾ.ಪಂ., ಯಕ್ಕನಹಳ್ಳಿ.
- ಶ್ರೀಮತಿ ಗೌರಮ್ಮ ಶ್ರೀ ದಿ|| ಹೆಚ್.ಉಜ್ಜಿನಪ್ಪ, ಬೆಳ್ಳೂಡಿ.
- ಶ್ರೀಮತಿ ಸವಿತಾ ಶ್ರೀ ಪಾಲಾಕ್ಷಪ್ಪ ಕೋಡಮಗ್ಗಿ, ಅಂಗರಕಟ್ಟೆ .

ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

- ಶ್ರೀ ಬಸವೇಶ್ವರ ರೈಸ್‌ಮಿಲ್, ಯಕ್ಕನಹಳ್ಳಿ.
- ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್, ಮಲೇಬೆನ್ನೂರು.
- ಶ್ರೀ ಆಂಜನೇಯ ಫಿಲ್ಲಿಂಗ್ ಸ್ಟೇಷನ್, ಕುಂದೂರು.

## 20ನೇ ಪುಣ್ಯಸ್ಮರಣೆ



**ದಿ|| ಮೃತ್ಯುಂಜಯಪ್ಪ ಹನಗೋಡಿ ಮಠ**
(13.10.2001)
ನಮ್ಮ ಪೂಜ್ಯ ತಂದೆಯವರು ದೈವಾಧೀನರಾಗಿ ಇಂದಿಗೆ 20 ವರ್ಷಗಳು ಕಳೆದಿರುತ್ತವೆ.
*ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ...*

ಸ್ವಾಮಿ ಎಲೆಕ್ಟ್ರಿಕಲ್ಸ್, ದಾವಣಗೆರೆ.
ಫೋ. : 98453 52427
ಶ್ರೀ ಮಂಜುನಾಥ ಟ್ರೇಡರ್ಸ್ (HMP), ದಾವಣಗೆರೆ.
ಫೋ. :98861 70350
ಹನಗೋಡಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

## ಶ್ರೀಮತಿ ಗೌರಮ್ಮ ಈರಪ್ಪ ಹಣಗಿ ನಿಧನ




ದಾವಣಗೆರೆ ಜಿಲ್ಲೆ ಹರಿಹರ ತಾ|| ವಾಸಿ
**ದಿ|| ಶ್ರೀ ಈರಪ್ಪ ಹಣಗಿ**
ಇವರ ಧರ್ಮಪತ್ನಿ
**ಶ್ರೀಮತಿ ಗೌರಮ್ಮ ಈರಪ್ಪ ಹಣಗಿ** (86)
(ಜನನ : 1.1.1936)
ಇವರು ದಿ.: 11.10.2021ರ ಸೋಮವಾರ ರಾತ್ರಿ 11.30ಕ್ಕೆ ನಿಧನರಾದರು.

ಇಬ್ಬರು ಪುತ್ರರು, ಏಳು ಜನ ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 13.10.2021ರ ಬೆಳಿಗ್ಗೆ 10.00 ಗಂಟೆಗೆ ಹುಬ್ಬಳ್ಳಿಯ ಕೇಶ್ವಾಪುರದ ಮುಕ್ತಿಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ
ಮೊ : 94810 11114

## ಚಂದ್ರಪ್ಪ ಬಳ್ಳಾರಿ (ತರಗಾರ ಮೇಸ್ತ್ರಿ) ನಿಧನ



ದಾವಣಗೆರೆ ಎಸ್.ಪಿ.ಎಸ್.ನಗರ 'ಡಿ' ಬ್ಲಾಕ್, ಕುರುಬರಕೇರಿ ವಾಸಿ ಚಂದ್ರಪ್ಪ ಬಳ್ಳಾರಿ (ತರಗಾರ ಮೇಸ್ತ್ರಿ- 52) ಅವರು ದಿನಾಂಕ 12.10.2021 ರ ಮಂಗಳವಾರ ರಾತ್ರಿ 9-40ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.10.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.


**ಬೆಳ್ಳಿ ಫೋಟೋಗಳು ಸಿಗುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಉಡುಗೊರೆಯಾಗಿ ಕೊಡಲು ಅನುಕೂಲ ದರದಲ್ಲಿ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ ಸರಸ್ವತಿ, ಶ್ರೀ ಕನ್ನಿಕಾ ಪರಮೇಶ್ವರಿದೇವಿ, ಸತ್ಯನಾರಾಯಣಸ್ವಾಮಿ, ಧರ್ಮಸ್ಥಳ ಮಂಜುನಾಥಸ್ವಾಮಿ, ಈಶ್ವರ ಲಿಂಗು, ನಂದಿ, ಯಲ್ಲಮ್ಮ ದೇವಿ, ಶಿವ-ಪಾರ್ವತಿ, ರಾಘವೇಂದ್ರ, ಆಂಜನೇಯ, ಶಿರಡಿ ಸಾಯಿಬಾಬಾ ಮುಂತಾದ ದೇವರ ಫೋಟೋಗಳು ಲಭ್ಯ. ಬೆಳ್ಳಿಯ ಬಾಳೆಕಂಬ, ಡಿಜೈನ್ ತಟ್ಟೆಗಳು, ಬೆಳ್ಳಿಯ ಹೂ ಬುಟ್ಟಿ ಮತ್ತು ಕಾಮಧೇನು, ಕಲ್ಪವೃಕ್ಷ ನಮ್ಮಲ್ಲಿ ದೊರೆಯುತ್ತವೆ. ಹೊಸದಾಗಿ ಅಂಗಡಿ ಪ್ರಾರಂಭಿಸಲು ಮಾಡುವ ಪೂಜೆ ವೈಟ್ ಮೆಟಲ್‌ನ ಸರ್ವಾಲಂಕಾರದ ದೇವಿ ಫೋಟೋಗಳು ದೊರೆಯುತ್ತವೆ.
**ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್**
ಮಳಿಗೆ ನಂ.34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.
99451 59582, 98862 18185


## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ವಾಸಿ ಟಿ.ಕೆ.ಮಂಜುನಾಥ್**
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ತಾಯಿ: **ರತ್ನಮ್ಮ** ಪತ್ನಿ : **ಶ್ರೀಮತಿ ಲಕ್ಷ್ಮಿ**
ಮಕ್ಕಳಾದ : **ಸಾಯಿ ಹೃದಯ್, ಅದ್ವಿಕ**
ಅಣ್ಣ: ಶ್ರೀ ವಾಸಿ ಟಿ.ಕೆ. ರವಿಕುಮಾರ್ ಶ್ರೀಮತಿ ಉಮಾಮಹೇಶ್ವರಿ ಮತ್ತು ಮಕ್ಕಳು
ಅಕ್ಕಂದಿರು: ಶ್ರೀಮತಿ ಸುನೀತ ವೆಂಕಟೇಶ್ ,ಶ್ರೀಮತಿ ಶೋಭಾ ಮಲ್ಲಿಕಾರ್ಜುನ್ ಮತ್ತು ಮಕ್ಕಳು
ನ್ಯೂ ರತ್ನ ಹೊಜೈರಿ ಮಾರ್ಟ್ . ಮೊ.93410-04249

## ಬಸಾಪುರದ ಶಾಂತಲಾ ಬಿ.ಎ. ನಿಧನ




ದಾವಣಗೆರೆ ಬಸಾಪುರ ಗ್ರಾಮದ ವಾಸಿ ಆಲದಹಳ್ಳಿ ಪರಮೇಶ್ವರಪ್ಪನವರ ಪುತ್ರಿ **ಶಾಂತಲಾ ಬಿ.ಎ.** ಇವರು ದಿನಾಂಕ 12.10.2021ರ ಮಂಗಳವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 51 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.10.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಬಸಾಪುರ ಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 89700 01239

## ಮೂರನೇ ವರ್ಷದ ಪುಣ್ಯಸ್ಮರಣೆ

ಜನನ: 04.06.1978



ಮರಣ: 13.10.2018

**ಲಿಂ|| ಶ್ರೀ ಕೆ.ವಿ. ಪ್ರಶಾಂತರವರು**
ಕಬ್ಬೂರು, ದಾವಣಗೆರೆ ತಾಲ್ಲೂಕು
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ತಂದೆ: ಶ್ರೀ ಎಂ.ಜಿ. ವೀರೇಶ್, ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರು
ತಾಯಿ : ಶ್ರೀಮತಿ ರತ್ನ ವೀರೇಶ್
ಸಹೋದರಿ : ಶ್ರೀಮತಿ ಪ್ರತಿಭಾ ಕೆ.ವಿ. ಶ್ರೀ ಭೈರೇಗೌಡರು, ಬೆಂಗಳೂರು
ಮತ್ತೆ ಹುಟ್ಟಿ ಬಾ ಮಾಮ: ಚಿ|| ವಿಸ್ಮಿತ ಮತ್ತು ಚಿ|| ಥಾನಿಶ್
ಹಾಗೂ ಕುಟುಂಬ ವರ್ಗದವರು ಮತ್ತು ಕಬ್ಬೂರು ಗ್ರಾಮಸ್ಥರು.

## ರೈಲ್ವೇ ಕೆಳಸೇತುವೆ : ಶಾಶ್ವತ ಪರಿಹಾರ

**(1ನೇ ಪುಟದಿಂದ)** ಹೊರತುಪಡಿಸಿ, ಉಳಿದ ಕಸಕಡ್ಡಿಗಳನ್ನು ತುಂಡರಿಸಿ ಡ್ರೈನೇಜ್‌ಗೆ ಹರಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಕೆಳ ಸೇತುವೆಯ ಎರಡೂ ತುದಿಗಳಿಂದ ಬರುವ ನೀರು ಕೆಳಗೆ ಸಾಗಲು ಎರಡೂ ಭಾಗದ ರಸ್ತೆಗಳಲ್ಲೂ ಸುಮಾರು 60 ಮೀಟರ್ ಉದ್ದದ ಕಬ್ಬಿಣದ ಕೆಟಲ್ ಟ್ರ್ಯಾಪ್ ಅಳವಡಿಸಲಾಗುತ್ತಿದೆ. ಅಲ್ಲದೇ ರಸ್ತೆಯ ಮಧ್ಯೆಯೂ ಸಹ 3 ಕೆಟಲ್ ಟ್ರ್ಯಾಪ್ ಅಳವಡಿಸಲಾಗುತ್ತಿದೆ. ಅದಕ್ಕೆ ಲಗತ್ತಾಗಿ ರಸ್ತೆ ಕಾಂಕ್ರೀಟೀಕರಣಗೊಳ್ಳಲಿದೆ. ಆಗಸ್ಟ್ ತಿಂಗಳಲ್ಲಿ ಈ ಶಾಶ್ವತ ಪರಿಹಾರದ ಕಾಮಗಾರಿ ಆರಂಭಗೊಂಡಿದ್ದು, ಇನ್ನು 10-15 ದಿನಗಳಲ್ಲಿ ಮುಗಿಯಲಿದೆ. ಕೆಟಲ್ ಟ್ರ್ಯಾಪ್ ಅಳವಡಿಕೆ ನಂತರ ಸಿಮೆಂಟ್ ಮಾಡಿದಾಗ ಕ್ಯೂರಿಂಗ್‌ಗೆ ಕೆಲ ದಿನಗಳ ಬೇಕಾಗುತ್ತವೆ ಎನ್ನುತ್ತಾರೆ ಅಧಿಕಾರಿಗಳು.

ಒಟ್ಟಿನಲ್ಲಿ ಈ ತಿಂಗಳಾಂತ್ಯಕ್ಕೆ ದಾವಣಗೆರೆಯ ಮುಖ್ಯ ಸಮಸ್ಯೆಗಳಲ್ಲೊಂದಾಗಿದ್ದ ಕೆಳ ಸೇತುವೆ ಸಮಸ್ಯೆಗೆ ಮುಕ್ತಿ ದೊರೆಯುವ ಆಶಾಭಾವನೆ ನಾಗರಿಕರಲ್ಲಿದೆ. ಇದೇ ರೀತಿ ಅಶೋಕ ರಸ್ತೆ ರೈಲ್ವೇ ಕ್ರಾಸಿಂಗ್ ಸಮಸ್ಯೆಗೂ ಶಾಶ್ವತ ಮುಕ್ತಿ ದೊರಕಲಿ. ಅಲ್ಲಿಯ ವರೆಗಾದರೂ ಶೀಘ್ರ ಅಶೋಕ ರಸ್ತೆ ದುರಸ್ತಿ ಪಡಿಸಲಿ ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.

## ಮೇಯುತ್ತಿದ್ದ ಹಸು ಚಿರತೆಗೆ ಬಲಿ

ದಾವಣಗೆರೆ, ಅ.12- ಗುಡ್ಡದಲ್ಲಿ ಮೇಯಲು ಹೋಗಿದ್ದ ಹಸುವಿನ ಮೇಲೆ ಚಿರತೆಯೊಂದು ದಾಳಿ ನಡೆಸಿ ಬಲಿ ತೆಗೆದುಕೊಂಡ ಘಟನೆ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದ ಶ್ರೀ ಹಾಲಸ್ವಾಮಿ ಗವಿಮಠದ ಮೇಲ್ಭಾಗದಲ್ಲಿ ನಡೆದಿದೆ.

ಮೃತ ಹಸು ಬಿಷ್ಟಪ್ಪನವರ ಹಾಲೇಶಪ್ಪ ಎಂಬುವವರಿಗೆ ಸೇರಿದ್ದಾಗಿದೆ. ಹಸು ರಾತ್ರಿ ಮನೆಗೆ ಹಿಂತಿರುಗಿರಲಿಲ್ಲ. ಹಸುವನ್ನು ಹುಡುಕಲು ಹೋದಾಗ ಹಸು ಚಿರತೆ ದಾಳಿಯಿಂದ ಮೃತಪಟ್ಟಿರುವುದು ಕಂಡು ಬಂದಿದೆ.

ಜಾನುವಾರಿನ ಮೇಲೆ ದಾಳಿ ಮಾಡಿರುವ ಚಿರತೆಯನ್ನು ಕೂಡಲೇ ಬೋನು ಅಳವಡಿಸಿ ಹಿಡಿಯಬೇಕು ಎಂದು ರೈತರು, ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಸೈಯದ್ ರಫೀಕ್ ಹಾಗೂ ಸದಸ್ಯರು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

# ಸಮಾಜದಿಂದ ಫಲಾಪೇಕ್ಷೆ ಬಯಸಿ, ಕಡೆಗಣಿಸಿದರೆ ಏಳಿಗೆ ಸಾಧ್ಯವಿಲ್ಲ

## ಮಡಿವಾಳ ಮಾಚಿದೇವ ಸಮಾಜ ಬಾಂಧವರಿಗೆ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಕಿವಿಮಾತು

ದಾವಣಗೆರೆ, ಅ.12- ಸಮಾಜದಿಂದ ಫಲಾಪೇಕ್ಷೆ ಬಯಸುತ್ತಾ ಕಡೆಗಣಿಸಿದರೆ ಸರ್ಕಾರ ಸಮಾಜದತ್ತ ತಿರುಗಿ ನೋಡುವುದಿಲ್ಲ. ಅಲ್ಲದೇ, ವೈಯಕ್ತಿಕ ಏಳಿಗೆಯನ್ನೂ ಕಾಣಲು ಸಾಧ್ಯವಿಲ್ಲ ಎಂದು ಚಿತ್ರದುರ್ಗದ ಮಡಿವಾಳ ಮಾಚಿದೇವ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಬಸವ ಮಾಚಿದೇವ ಸ್ವಾಮೀಜಿ ತಿಳುವಳಿಕೆ ಮೂಡಿಸಿದರು.



ಇಲ್ಲಿನ ವಿನೋಬ ನಗರದಲ್ಲಿರುವ ಶ್ರೀ ಮಡಿವಾಳ ಮಾಚಿದೇವ ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ, ಕಾರ್ಮಿಕ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಮಡಿವಾಳ ಮಾಚಿದೇವ ಸಂಘ, ಮಡಿಕಟ್ಟೆ ಸಮಿತಿಯಿಂದ ಇಂದು ಆಯೋಜಿಸಲಾಗಿದ್ದ ಅಸಂಘಟಿತ ಕಾರ್ಮಿಕರ ವಲಯದಲ್ಲಿ ಬರುವ ಮಡಿವಾಳ ಸಮುದಾಯದ ವೃತ್ತಿನಿರತರಿಗೆ ಆಹಾರದ ಕಿಟ್ ವಿತರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಕೇವಲ ಸಮಾಜದಿಂದ ಸವಲತ್ತುಗಳನ್ನು ಪಡೆಯಲು ಒಂದೆಡೆ ಸೇರುವುದಲ್ಲ. ಸಮಾಜದ ಎಲ್ಲಾ ಕಾರ್ಯಕ್ರಮಗಳು, ಪ್ರತಿಭಟನೆಗಳು, ಹೋರಾಟಗಳಿಗೆ ಭಾಗವಹಿಸುತ್ತೇನೆ ಎನ್ನುವ ಮನಸ್ಸಿದ್ದರೆ ಮಾತ್ರ ಆಹಾರದ ಕಿಟ್ ಪಡೆಯಿರಿ. ಇಲ್ಲವಾದಲ್ಲಿ ಪಡೆಯಬೇಡಿ ಎಂದು ಕಿಡಿಕಾರಿದ ಶ್ರೀಗಳು, ನಾವುಗಳ ಒಗ್ಗಟ್ಟಾಗಿ ಹೋರಾಟ ಮಾಡದಿದ್ದರೆ ಯಾವುದೇ ಸವಲತ್ತುಗಳು ನಮಗೆ ಸರ್ಕಾರದಿಂದ ದೊರೆಯುವುದಿಲ್ಲ. ಇದೇ ರೀತಿ ನಾವು ಸುಮ್ಮನಿದ್ದರೆ ಎಲ್ಲಾ ಸರ್ಕಾರಗಳು ನಮ್ಮನ್ನು ನಿರ್ಲಕ್ಷಿಸಲಿವೆ. ಅಷ್ಟೇ ಅಲ್ಲದೆ ನಮ್ಮತ್ತ ತಿರುಗಿಯೂ ನೋಡಲ್ಲ ಎಂದು ಎಚ್ಚರಿಕೆಯ ಮಾತುಗಳನ್ನಾಡಿದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಇದೀಗ ತಂತ್ರಜ್ಞಾನದ ಕಾಲ, ಕಾಲಕ್ಕೆ ತಕ್ಕಂತೆ ನಮ್ಮಗಳ ವೃತ್ತಿ ಬದಲಾವಣೆ ಮಾಡಿಕೊಳ್ಳಬೇಕು. ಕೊರೊನಾದಂತಹ ಸಂದರ್ಭದಲ್ಲಿ ಎಲ್ಲಾ ವರ್ಗಗಳು ದುಡಿಮೆ ಇಲ್ಲದೇ ಬೀದಿಗೆ ಬಿದ್ದಿದ್ದಾರೆ. ಸರ್ಕಾರದಿಂದ ಇದೀಗ ಕೊಡುವ ಸೌಲಭ್ಯ ಸರ್ಕಾರ ತನ್ನ ಹಣದಿಂದ ನೀಡಲ್ಲ. ಬದಲಿಗೆ ನಮ್ಮಗಳ ತೆರಿಗೆ ಹಣದಿಂದಲೇ ನಮಗೆ ನೀಡುತ್ತದೆ. ಆದರೆ, ಅದರ ಗುಣಮಟ್ಟವನ್ನು ಇಲಾಖೆಗಳು ಕಾಯ್ದುಕೊಳ್ಳಬೇಕು. ಅಂತೆಯೇ ನಾವುಗಳು ಕಾಯಕ ಜೀವಿಗಳಾಗಬೇಕು. ಮಾತ್ರವಲ್ಲ ಶಿಕ್ಷಿತರಾಗಿ ಉನ್ನತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಹಿರಿಯ ನ್ಯಾಯವಾದಿ ಎಲ್.ಹೆಚ್.ಅರುಣ್ ಕುಮಾರ್ ಮಾತನಾಡಿ, ಸರ್ಕಾರ ನೀಡಿದಂತಹ ಯಾವುದೇ ಸೌಲಭ್ಯಗಳಾಗಲೀ ಅದರಲ್ಲಿ ರಾಜಕಾರಣಿಗಳು, ಅವರ ಹಿಂಬಾಲಕರ ಹಸ್ತಕ್ಷೇಪ ಇದ್ದೇ ಇರುತ್ತದೆ. ಈ ರೀತಿ ಎಲ್ಲಾ ಹಂತಗಳನ್ನು ದಾಟಿ ಅಧಿಕಾರಿಗಳು ಸಾರ್ವಜನಿಕರಿಗೆ ಸವಲತ್ತುಗಳನ್ನು ನೀಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಜಿಲ್ಲಾಧ್ಯಕ್ಷ ಎಂ. ನಾಗೇಂದ್ರಪ್ಪ ವಹಿಸಿದ್ದರು.

ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಇಬ್ರಾಹಿಂ ಸಾಬ್, ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ.ರಾಘವೇಂದ್ರ ನಾಯರಿ, ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ರಾಜಾಧ್ಯಕ್ಷ ಆವರಗೆರೆ ಹೆಚ್. ಜಿ.ಉಮೇಶ್, ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಅಧ್ಯಕ್ಷ ಬಿ.ಆರ್. ಪ್ರಕಾಶ್ ಮಾತನಾಡಿದರು.

ವೇದಿಕೆಯಲ್ಲಿ ದೀಪಕ್, ಪತ್ರಕರ್ತ ಎಂ.ವೈ. ಸತೀಶ್, ಕೋಗುಂಡೆ ಸುರೇಶ್, ಎಂ. ಮಂಜುನಾಥ್, ವಿಜಯ್‌ಕುಮಾರ್, ಮಡಿಕಟ್ಟೆ ಸಂಘದ ಅಧ್ಯಕ್ಷ ಫಕ್ಕೀರಸ್ವಾಮಿ, ಕಿಶೋರ್‌ಕುಮಾರ್, ಮಂಜುನಾಥ್ ಕಕ್ಕರಗೊಳ್ಳ, ಬಸವರಾಜ್, ರುದ್ರೇಶ್, ನಾಗಮ್ಮ ಸೇರಿದಂತೆ ಇತರರು ಇದ್ದರು

# ಹಾನಗಲ್ ಚುನಾವಣೆಗಾಗಿ ನಗರದಲ್ಲಿ ಸಿಎಂ ತಂತ್ರಗಾರಿಕೆ

**(1ನೇ ಪುಟದಿಂದ)** ಪಂಚಮಸಾಲಿ ಸಮುದಾಯ ಗೆಲುವಿನಲ್ಲಿ ಗಣನೀಯ ಪಾತ್ರ ವಹಿಸಲಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಮುಖಂಡರ ಜೊತೆ ಬೊಮ್ಮಾಯಿ ಚರ್ಚಿಸಿರುವುದು ಪ್ರಾಮುಖ್ಯತೆ ಪಡೆದಿದೆ.

ಬಿಜೆಪಿಯಿಂದ ಬಂಡಾಯ ಅಭ್ಯರ್ಥಿಯಾಗಿರುವ ಸಿ.ಆರ್. ಬಳ್ಳಾರಿ ಅವರು ನಾಮಪತ್ರ ವಾಪಸ್ ಪಡೆಯುವ ಬಗ್ಗೆ ಮುಖ್ಯಮಂತ್ರಿ ಮನವೊಲಿಸಿದ್ದಾರೆ. ನಾಮಪತ್ರ ವಾಪಸ್ ಪಡೆಯಲು ಅಂತಿಮ ದಿನವಾಗಿರುವ ನಾಳೆ ಬುಧವಾರ ಅವರು ನಾಮಪತ್ರ ವಾಪಸ್ ಪಡೆಯಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಳ್ಳಾರಿ ಅವರು ಮುಖ್ಯಮಂತ್ರಿಗೆ ಹಿಂದಿನಿಂದಲೂ ಆಪ್ತರು. ಈ ಹಿನ್ನೆಲೆಯಲ್ಲಿ ಸ್ವತಃ ಮುಖ್ಯಮಂತ್ರಿಯವರೇ ಕರೆಸಿಕೊಂಡು ಮನವೊಲಿಸಿದ್ದಾರೆ. ಅಲ್ಲದೇ ಬಳ್ಳಾರಿ ಅವರ ಸಹೋದರ ಬ್ಯಾಡಗಿ ಕ್ಷೇತ್ರದಲ್ಲಿ ಶಾಸಕರಾಗಿದ್ದಾರೆ. ಹೀಗಾಗಿ ಅವರ ನಾಮಪತ್ರ ವಾಪಸಾತಿ ಶೇ.99ರಷ್ಟು ಖಚಿತ ಎಂದೂ ಮೂಲಗಳು ಹೇಳಿವೆ.

ಚುನಾವಣಾ ಸಮಾಲೋಚನೆ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಬೊಮ್ಮಾಯಿ, ಜಿಲ್ಲೆಯ ಶಾಸಕರು ಹಾಗೂ ಮುಖಂಡರ ಜೊತೆ ಅಭಿವೃದ್ಧಿ ವಿಚಾರ ಚರ್ಚಿಸಿದ್ದೇನೆ. ಇದೇ ವೇಳೆ ಹಾನಗಲ್ ಉಪ ಚುನಾವಣೆಯ ತಂತ್ರಗಾರಿಕೆಯ ಬಗ್ಗೆಯೂ ಚರ್ಚಿಸಿದ್ದೇನೆ. ಹಾನಗಲ್ ಹಾಗೂ ಸಿಂಧಗಿ ಎರಡರಲ್ಲೂ ನಮ್ಮ ಅಭ್ಯರ್ಥಿಗಳು ಗೆಲ್ಲುವ ವಿಶ್ವಾಸವಿದೆ ಎಂದವರು ಹೇಳಿದ್ದಾರೆ.

ಸಿ.ಆರ್. ಬಳ್ಳಾರಿ ಹಾಗೂ ನಮ್ಮದು ಬಹಳ ಹಳೆಯ ಸಂಬಂಧ, ಅವರು ಶಿವಕುಮಾರ ಉದಾಸಿ ಅವರಿಗೂ ಹತ್ತಿರದವರು. ನಾನು ಇಲ್ಲಿಗೆ ಬರುವುದನ್ನು ತಿಳಿದು, ಅವರೇ ಭೇಟಿಯಾಗಲು ಬಂದಿದ್ದಾರೆ. ನಾಮಪತ್ರ ವಾಪಸ್ಸಾತಿ ಬಗ್ಗೆ ಅವರ ಬೆಂಬಲಿಗರು ಹಾಗೂ ಸಮಾಜದ ಮುಖಂಡರ ಜೊತೆ ಚರ್ಚಿಸಿ, ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಬಳ್ಳಾರಿ, ಬುಧವಾರ ಹಾನಗಲ್‌ನಲ್ಲಿ ಸಮಾಜದ ಮುಖಂಡರ ಜೊತೆ ಚರ್ಚಿಸಿ, ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇನೆ. ಬಸವರಾಜ ಬೊಮ್ಮಾಯಿ ಮತ್ತು ನಾನು ಸ್ನೇಹಿತರು. ಅವರು ಮುಖ್ಯಮಂತ್ರಿ ಆಗಿರುವಾಗ ಚುನಾವಣೆಯಲ್ಲಿ ಹೆಚ್ಚುಕಮ್ಮಿ ಆದರೆ ಅವರಿಗೆ ಗೌರವ ತರುವಂಥದ್ದಲ್ಲ. ಆ ದೃಷ್ಟಿಯಿಂದ ಬಹಳಷ್ಟು ವಿಚಾರ ಮಾಡುತ್ತಿದ್ದೇವೆ ಎಂದಿದ್ದಾರೆ.

### ಐ.ಟಿ.ಯಿಂದ ಬಿಎಸ್‌ವೈ ನಿಯಂತ್ರಣವಿಲ್ಲ : ಮುನಿರತ್ನ


ಆದಾಯ ತೆರಿಗೆ ದಾಳಿ ಮೂಲಕ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ನಿಯಂತ್ರಣ ಮಾಡುವ ಪ್ರಶ್ನೆಯೇ ಇಲ್ಲ. ಆದಾಯ ತೆರಿಗೆ ಇಲಾಖೆ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತದೆ. ಇದರಲ್ಲಿ ಯಾರೂ ರಾಜಕೀಯ ತರಬಾರದು ಎಂದು ಸಚಿವ ಮುನಿರತ್ನ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿಕಟವರ್ತಿಗಳ ಮೇಲೆ ಆದಾಯ ತೆರಿಗೆ ಇಲಾಖೆಯ ದಾಳಿ ನಡೆದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ಸಿಗರ ಮೇಲೆ ಮಾತ್ರ ಕೇಂದ್ರ ಸರ್ಕಾರ ಐ.ಟಿ. ದಾಳಿ ಮಾಡಿಸುತ್ತಿದೆ ಎಂದು ಹೇಳುತ್ತಿದ್ದ ಕಾಂಗ್ರೆಸ್‌ನವರು, ಈಗ ಏಕೆ ಮೌನವಾಗಿದ್ದಾರೆ? ಎಂದಿದ್ದಾರೆ. ಕಾಂಗ್ರೆಸ್‌ಗೆ ಮತ್ತೆ ಹೋಗುವ ಪ್ರಶ್ನೆಯೇ ಇಲ್ಲ ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಬಿಜೆಪಿ ಸದಸ್ಯರು, ಶಾಸಕ, ಸಚಿವರಾಗಿದ್ದೇವೆ. ಪಕ್ಷ ನಮಗೆ ಎಲ್ಲವನ್ನೂ ಕೊಟ್ಟಿದೆ, ಗೌರವಯುತವಾಗಿ ನಡೆಸಿಕೊಂಡಿದೆ. ಇನ್ನು ಮುಂದೆ, ಜೀವನದುದ್ದಕ್ಕೂ ಬಿಜೆಪಿಯಲ್ಲಿರುತ್ತೇವೆ ಎಂದು ಹೇಳಿದರು.

### ಉಪ ಚುನಾವಣೆಯಲ್ಲಿ ಗೆಲ್ಲುವ ಭರವಸೆ

**(1ನೇ ಪುಟದಿಂದ) ಗೆಲ್ಲುತ್ತೇವೆ ಎಂದು ಸಚಿವ ಮುನಿರತ್ನ ತಿಳಿಸಿದ್ದಾರೆ. ಸಂಸದ ಶಿವಕುಮಾರ ಉದಾಸಿ ಮಾತನಾಡಿದ್ದು, ಹಾನಗಲ್ ಕ್ಷೇತ್ರದಲ್ಲಿ 1,500 ಕೋಟಿ ರೂ.ಗಳಿಗೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಾಗಿವೆ. ಸಜ್ಜನ್ ಗೆಲ್ಲುವ ವಿಶ್ವಾಸವಿದೆ ಎಂದಿದ್ದಾರೆ. ಹಾವೇರಿ ಸಂಸದ ಶಿವಕುಮಾರ್ ಉದಾಸಿ ಮತ್ತು ನಾನು ಅಣ್ಣ-ತಮ್ಮನಂತೆ ಇದ್ದೇವೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಮುಖ್ಯಮಂತ್ರಿ ಕೂಡ ನಮ್ಮ ಜಿಲ್ಲೆಯವರು, ನಮ್ಮ ಕ್ಷೇತ್ರದ ಅಳಿಯಂದಿರು. ಈ ಚುನಾವಣೆಯಲ್ಲಿ ಗೆಲುವು ನಿಶ್ಚಿತ ಎಂದು ಹಾನಗಲ್ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ಶಿವರಾಜ್ ಸಜ್ಜನ್ ಹೇಳಿದ್ದಾರೆ.**

## ನಗರದಲ್ಲಿಂದು ಮದಕರಿ ನಾಯಕ ಜಯಂತ್ಯೋತ್ಸವ



ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ರಾಜವೀರ ಮದಕರಿ ನಾಯಕ ಜಯಂತ್ಯೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ರಾಜವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದಲ್ಲಿ ರುವ ರಾಜವೀರ ಮದಕರಿ ನಾಯಕ ಕಂಚಿನ ಪ್ರತಿಮೆಗೆ ಇಂದು ಬೆಳಿಗ್ಗೆ 11.30ಕ್ಕೆ ಮಾಲಾರ್ಪಣೆ ಮಾಡು ವುದರ ಮೂಲಕ ಅವರ ಜಯಂತಿಯನ್ನು ಆಚರಿಸಲಾಗುವುದು. ನಂತರ ಸಾರ್ವಜನಿಕರಿಗೆ ಸಿಹಿ ಹಂಚಿಕೆ ಮಾಡಲಾಗುವುದು. ಸಮಾಜ ಬಾಂಧವರು, ಸಾರ್ವಜನಿ ಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರೂ ಆದ ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ ಕೋರಿದ್ದಾರೆ.

## ಸ್ವಚ್ಛ ಭಾರತ, ಅಮೃತ್ ಎರಡನೇ ಹಂತಕ್ಕೆ ಸಂಪುಟದ ಒಪ್ಪಿಗೆ


ನವದೆಹಲಿ, ಅ. 12 – ಸ್ವಚ್ಛ ಭಾರತ ಮಿಷನ್ - ನಗರ ಹಾಗೂ ಅಮೃತ್ ಯೋಜನೆಗಳ ಎರಡನೇ ಹಂತಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಸ್ವಚ್ಛ ಭಾರತ ಯೋಜನೆಗೆ 1.41ಲಕ್ಷ ಕೋಟಿ ರೂ. ಹಾಗೂ ಅಮೃತ್ ಯೋಜನೆಗೆ 36,465 ಕೋಟಿ ರೂ.ಗಳ ವೆಚ್ಚವಾಗಲಿದೆ. ಇದು ಹಿಂದಿನ ಯೋಜನೆಗೆ ಹೋಲಿಸಿದರೆ 2.5 ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ನಗರದ ತುಳಜಾ ಭವಾನಿ ದೇವಸ್ಥಾನದಲ್ಲಿಂದು ಹೋಮ

ಕೆಟಿಜೆ ನಗರ 3ನೇ ಮುಖ್ಯ ರಸ್ತೆಯ 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ನಾಡ ಹಬ್ಬ ದಸರಾ ಮಹೋತ್ಸವದ ದುರ್ಗಾಷ್ಟಮಿ ದಿನವಾದ ಇಂದು ಚಂಡಿಕಾ ಹೋಮ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ.

## 2023 ನನ್ನ ಕೊನೆ ಚುನಾವಣೆ



ಮೈಸೂರು, ಅ. 12 – ಬರುವ 2023ರ ವಿಧಾನಸಭಾ ಚುನಾವಣೆ ತಮ್ಮ ಕೊನೆಯ ಚುನಾವಣೆಯಾಗಲಿದೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಿದ್ದ ಅವರು, 2023ರ ವಿಧಾನಸಭಾ ಚುನಾವಣೆ ನನ್ನ ಕೊನೆಯ ಹೋರಾಟವಾಗಲಿದೆ. ಈ ಚುನಾವಣೆಯಲ್ಲಿ ಸ್ವತಂತ್ರವಾಗಿ ಮುಖ್ಯಮಂತ್ರಿಯಾಗಲು ಆಶೀರ್ವಾದ ಹಾಗೂ ಬೆಂಬಲ ನೀಡುವಂತೆ ಅವರು ಕರೆ ನೀಡಿದ್ದಾರೆ.

## ಅಕ್ರಮ ಆದಾಯ ಪತ್ತೆ

**(1ನೇ ಪುಟದಿಂದ)** ಆಗಿದೆ. ಇನ್ನೊಂದು ಸಂಸ್ಥೆ 382 ಕೋಟಿ ರೂ.ಗಳ ಹೆಚ್ಚಿನ ಕೂಲಿ ವೆಚ್ಚ ತೋರಿಸಿರುವುದನ್ನು ಒಪ್ಪಿಕೊಂಡಿದೆ. ಮತ್ತೊಂದು ಗುಂಪು ಅಸ್ತಿತ್ವದಲ್ಲಿ ಇರದೇ ಇರುವ ಕಂಪನಿಗಳನ್ನು ತೋರಿಸಿ 105 ಕೋಟಿ ರೂ.ಗಳವರೆಗಿನ ಅಕ್ರಮ ಎಸಗಿದೆ. ದಾಳಿಯ ವೇಳೆ 4.69 ಕೋಟಿ ರೂ.ಗಳ ಲೆಕ್ಕವಿಲ್ಲದ ನಗದು, ಆಭರಣ ಹಾಗೂ 8.67 ಕೋಟಿ ರೂ. ಮೌಲ್ಯದ ಬಂಗಾರ ಮತ್ತು 29.83 ಲಕ್ಷ ರೂ.ಗಳ ಬೆಳ್ಳಿ ವಶಪಡಿಸಿಕೊಳ್ಳಲಾಗಿದೆ.

## ವಿಮಾನ ಪ್ರಯಾಣಿಕರ ನಿರ್ಬಂಧ ತೆರವು

ನವದೆಹಲಿ, ಅ. 1 2 -ಬರುವ ಅಕ್ಟೋಬರ್ 18ರ ನಂತರ ವಿಮಾನಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಬಹುದು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ಕೊರೊನಾ ಹಿನ್ನೆಲೆಯಲ್ಲಿ, ವಿಮಾನಗಳು ಶೇ.85ರ ಸಾಮ ರ್ಥ್ಯದಲ್ಲಿ ಕಾರ್ಯ ನಿರ್ವಹಿಸಲು ಇದುವರೆಗೆ ನಿರ್ಬಂಧಿಸಲಾಗಿತ್ತು.

## ಇಂದು ಶಿಕ್ಷಕ ಸಿಬ್ಬಂದಿಗೆ ಆಹಾರ ಕಿಟ್ ವಿತರಣೆ

ದಾವಣಗೆರೆಯ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಆವರಣದ ಜಗದ್ಗುರು ಜಯದೇವ ಮುರುಘರಾಜೇಂದ್ರ, ಪ್ರೌಢಶಾಲೆ, ಶಿವಣ್ಣ ವಿ. ಚಿಗಟೇರಿ ಶಿಶು ವಿಹಾರ, ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ, ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆ ಆಂಗ್ಲ ಮಾಧ್ಯಮ, ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ನರ್ಸರಿ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನುದಾನ ರಹಿತ ಶಿಕ್ಷಕ ಸಿಬ್ಬಂದಿ ವರ್ಗದವರಿಗೆ ಕೋವಿಡ್-19 ಪ್ರಯುಕ್ತ ಆಹಾರ ಕಿಟ್ ವಿತರಣಾ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11.30 ಕ್ಕೆ ಅಕ್ಕಮಹಾದೇವಿ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಬಸವರಾಜಪ್ಪ ಬೆಳಗಾವಿ ವಹಿಸುವರು. ಬಿ.ಜಿ.ಅಜಯ್‌ಕುಮಾರ್ ಅತಿಥಿಯಾಗಿದ್ದಾರೆ. ಎಂ.ಕೆ. ಬಕ್ಕಪ್ಪ, ಮನೋಹರ್ ಎಸ್. ಚಿಗಟೇರಿ ಉಪಸ್ಥಿತರಿರುವರು.

## ಅತ್ತಿಗೆರೆ ಪದವಿ ಪೂರ್ವ ಕಾಲೇಜಿನಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಅತ್ತಿಗೆರೆ ಗ್ರಾಮದ ಶ್ರೀಮತಿ ಚನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ವಿದ್ಯಾರ್ಥಿಗಳಿಗೆ ಉಚಿತ ಶುಲ್ಕ, ಪಠ್ಯಪುಸ್ತಕ, ಸಮವಸ್ತ್ರ ವಿತರಣೆ ಸಮಾರಂಭ ನಡೆಯಲಿದೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿದ್ಯಾಸಂಸ್ಥೆಯ ಅಧ್ಯಕ್ಷ, ಪ್ರೊ. ಹೆಚ್. ಚನ್ನಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಎಸ್.ಬಿ. ಬಸವನಗೌಡ, ಗ್ರಾಪಂ ಅಧ್ಯಕ್ಷೆ ಯಶೋಧಮ್ಮ ಗೌರವ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳು : ಎಂ. ಶಿವರಾಜ್, ಜಿ.ಸಿ. ನಿರಂಜನ್, ಎ.ಜಿ. ನಾಗಪ್ಪ. ಇದೇ ಸಂದರ್ಭದಲ್ಲಿ ನಿವೃತ್ತ ಯೋಧ ಹೆಚ್. ಸುರೇಶ್‌ರಾವ್ ಅವರನ್ನು ಸನ್ಮಾನಿಸಲಾಗುತ್ತದೆ ಎಂದು ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಪ್ರೊ. ಕೆ.ಆರ್. ಸಿದ್ದಪ್ಪ ತಿಳಿಸಿದ್ದಾರೆ.

## ನಗರಕ್ಕೆ ಇಂದು ಮಿಸಸ್ ಇಂಡಿಯಾ ವಿಜೇತೆ ರಶ್ಮಿ

ಸ್ಟೇಟ್ ಪಾರ್ಕ್ ಫಿಟ್ನೆಸ್ ಜಿಮ್‌ನಲ್ಲಿ ಇಂದು ಮತ್ತು ನಾಳೆ ದಾಂಡಿಯಾ ನೃತ್ಯ ನಡೆಯಲಿದೆ ಎಂದು ಜಿಮ್ ಮಾಲೀಕ ರೂಪಿತ್ ನಾಗರಾಜ್ ತಿಳಿಸಿದ್ದಾರೆ.

ಇಂದು ನೃತ್ಯದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. 'ಮಿಸೆಸ್ ಇಂಡಿಯಾ ಐ ಆಮ್ ಪವರ್‌ಫುಲ್' ರಾಷ್ಟ್ರೀಯ ಮಟ್ಟದ ಸ್ಪರ್ಧೆಯ ಐ ಆಮ್ ಪವರ್ ಫುಲ್ ವರ್ಲ್ಡ್ ವಿಭಾಗದಲ್ಲಿ ಕಿರೀಟ ಧರಿಸುವುದರ ಮೂಲಕ ಅಂತರ ರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿರುವ ರಶ್ಮಿ ರಂಗಪ್ಪ ಅವರನ್ನು ಸನ್ಮಾನಿಸಲಾಗುತ್ತದೆ.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಾಜಿ ಮೇಯರ್ ಶ್ರೀಮತಿ ರೇಖಾ ನಾಗರಾಜ್, ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಅವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಡಿಕೆಶಿಗಾಗಿ ಸಮೀಕ್ಷೆ ನಡೆಸುತ್ತಿದ್ದ ಕಚೇರಿ ಮೇಲೆ ಐ.ಟಿ. ದಾಳಿ

**(1ನೇ ಪುಟದಿಂದ)** ಮುಂದಾಗಿದ್ದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಆಗಬೇಕೆಂದು ಬಯಸಿರುವವರಿಗೆ ಶಿವಕುಮಾರ್ ಅವರ ಈ ನಡೆ ಇಷ್ಟ ಇರಲಿಲ್ಲ.

ಅವರ ಬೆಂಬಲಿಗರೇ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ನೀಡಿ ದಾಳಿ ನಡೆಸಲು ಕಾರಣವಾಗಿದ್ದಾರೆ ಎಂದು ಶಿವಕುಮಾರ್ ಬೆಂಬಲಿಗರು ಹೇಳಿಕೊಂಡು ತಿರುಗುತ್ತಿದ್ದಾರೆ.

ಇತ್ತೀಚೆಗೆ ಆದಾಯ ಮತ್ತು ಇಡಿ ದಾಳಿಗೆ ಒಳಗಾಗಿದ್ದ ಕಾಂಗ್ರೆಸ್ ಮುಖಂಡರೊಬ್ಬರು ದೆಹಲಿಯಲ್ಲೇ ಬಿಡಾರ ಹೂಡಿ ದಾಳಿಗೆ ಕುಮ್ಮಕ್ಕು ನೀಡಿರಬಹುದೆಂಬ ಮಾತುಗಳು ಈ ವಲಯದಲ್ಲಿ ಕೇಳಿಬರುತ್ತಿವೆ. ಡಿಸೈನ್ ಬಾಕ್ಸ್‌ನ ಮಾಸಿಕ ಕೋಟ್ಯಂತರ ರೂ. ವೆಚ್ಚವನ್ನು ಶಿವಕುಮಾರ್ ಅವರಿಗಾಗಿ ಶಾಂತಿನಗರದ ಶಾಸಕ ಎನ್.ಎ. ಹ್ಯಾರಿಸ್ ಅವರ ಪುತ್ರ ಮತ್ತು ಪುತ್ರನ ಸ್ನೇಹಿತರು ಇದರ ಖರ್ಚು-ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ಹೇಳಲಾಗುತ್ತಿದೆ.

ಶಿವಕುಮಾರ್ ಅವರ ವರ್ಚಸ್ಸನ್ನು ಜಾಲತಾಣಗಳಲ್ಲಿ ಪಸರಿಸುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಹಾಗೂ ಮುಖಂಡರ ಮೇಲೆ ಟೀಕಾ ಪ್ರಹಾರವೂ ಈ ಸಂಸ್ಥೆಯಿಂದಲೇ ನಡೆಯುತ್ತಿತ್ತು. ಅಲ್ಲದೇ 224 ಕ್ಷೇತ್ರಗಳ ಸಮೀಕ್ಷೆ ಜೊತೆಗೆ ಯಾವ ಯಾವ ಕ್ಷೇತ್ರಗಳಲ್ಲಿ ಸದ್ಯದ ಪರಿಸ್ಥಿತಿ ಏನಿದೆ ಎಂಬ ಬಗ್ಗೆಯೂ ಸಂಸ್ಥೆ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸುತ್ತಿತ್ತು.

ಪಂಜಾಬ್‌ನ ಮೊಹಾಲಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಡಿಸೈನ್ ಬಾಕ್ಸ್, ರಾಷ್ಟ್ರದ ವಿವಿಧೆಡೆ ತನ್ನ ಶಾಖೆಗಳನ್ನು ತೆರೆದು ಕಾರ್ಯನಿರ್ವಹಿಸುತ್ತಿದೆ. ಇದರ ಜೊತೆ ಬೆಂಗಳೂರು ಮೂಲದ ಮತ್ತೊಂದು ಸಂಸ್ಥೆ 100 ಕೋಟಿ ರೂ. ವೆಚ್ಚದಲ್ಲಿ ಸಮೀಕ್ಷೆ ನಡೆಸಲು ವೇದಿಕೆ ಸಿದ್ಧಗೊಂಡಿತ್ತು.

ಡಿಸೈನ್ ಬಾಕ್ಸ್ ಮತ್ತು ಇನ್ನೊಂದು ಸಂಸ್ಥೆ ನೀಡುವ ವರದಿ ಆಧರಿಸಿ ಬಿಜೆಪಿ ಮತ್ತು ಜೆಡಿಎಸ್ ಮುಖಂಡರನ್ನು ಪಕ್ಷಕ್ಕೆ ಸೆಳೆದುಕೊಳ್ಳುವುದು, ಕಾಂಗ್ರೆಸ್ ಎಲ್ಲಿ ಮೂರನೇ ಸ್ಥಾನದಲ್ಲಿದೆಯೋ ಅಂತಹ ಕಡೆ ಮೊದಲ ಸ್ಥಾನಕ್ಕೇರಲು ಎಲ್ಲ ಮಾರ್ಗಗಳನ್ನು ಶಿವಕುಮಾರ್ ಅವರಿಗೆ ಈ ಸಂಸ್ಥೆಗಳು ನೀಡುತ್ತಿದ್ದವು. ಡಿಸೈನ್ ಬಾಕ್ಸ್‌ನ ವ್ಯವಸ್ಥಾಪಕ ನಿರ್ದೇಶಕ ನರೇಶ್ ಅರೋರ ನಿನ್ನೆಯಷ್ಟೇ ವಿದೇಶದಿಂದ ಬೆಂಗಳೂರಿಗೆ ಧಾವಿಸಿ, ಪಂಚತಾರಾ ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದರು. ಅವರನ್ನೂ ಅದೇ ಹೋಟೆಲ್‌ನಲ್ಲಿ ಆದಾಯ ತೆರಿಗೆ ಅಧಿಕಾರಿ ಗಳು ವಿಚಾರಣೆಗೆ ಒಳಪಡಿಸಿದ್ದಾರೆ.

ಶಿವಕುಮಾರ್ ಅವರಿಗೆ ಈ ಸಂಸ್ಥೆಯೊಂದಿಗೆ ಯಾವುದೇ ನೇರ ಪಾತ್ರವಿಲ್ಲ, ಇದಕ್ಕೆ ಬಂಡವಾಳ ಹೂಡಿರುವವರು ಪಕ್ಷದ ಹಿತೈಷಿಗಳು.

ದಾಳಿ ಕಾರ್ಯಾಚರಣೆ ಸಂದರ್ಭದ ಕ್ಷಣ ಕ್ಷಣದ ಎಲ್ಲ ವಿವರಗಳು ಕಚೇರಿಯ ಹಿಂದಿನ ರಸ್ತೆಯಲ್ಲಿರುವ ಶಿವಕುಮಾರ್ ನಿವಾಸಕ್ಕೆ ತಲುಪುತ್ತಿತ್ತು. ಇಂದು ಬೆಂಗಳೂರು ಮಾತ್ರವಲ್ಲದೆ, ರಾಷ್ಟ್ರದ ವಿವಿಧೆಡೆಯೂ ದಾಳಿಗಳು ನಡೆದಿವೆ.

## 2-18 : ಮಕ್ಕಳಿಗೆ ಲಸಿಕೆ

**(1ನೇ ಪುಟದಿಂದ)** ಲಸಿಕೆಯ ತುರ್ತು ಬಳಕೆಗೆ ಶಿಫಾರಸ್ಸು ಸಲ್ಲಿಸಲಾಗಿದೆ. ಡಿ.ಸಿ.ಜಿ.ಐ. ಈ ಪ್ರಸ್ತಾಪಕ್ಕೆ ಅಂತಿಮ ಅನುಮೋದನೆ ನೀಡಬೇಕಿದೆ.


**ನೆಲಮಾಳಿಗೆ ಬಾಡಿಗೆಗೆ ಇದೆ**

ಹೊನ್ನಾಳಿ ನಗರದ ಸಂಪಿಗೆ ರಸ್ತೆಯಲ್ಲಿ 20x80 = 1600 ಚದುರ ಅಡಿ ವಿಸ್ತೀರ್ಣವಿರುವ ವ್ಯವಸ್ಥಿತವಾದ ನೆಲಮಾಳಿಗೆ ಹಾಲ್ ಬಾಡಿಗೆಗೆ ಇದೆ.

ಗೋಪಾಲ್ ಕ್ಲಾತ್ ಸ್ಟೋರ್ಸ್ ಎದುರು ಡಾ. ರಾಜಕುಮಾರ ರವರ ಜಾಗದಲ್ಲಿ ನಿರ್ಮಾಣಗೊಂಡಿರುವ ಹಾಲ್ ಬೇಕಾದವರು ತಕ್ಷಣವೇ ಸಂಪರ್ಕಿಸಿರಿ.

**ಭರತ್ ಹೆಚ್‌ಪಿ - 98869 94108**


**ನಮ್ಮ ಎಲ್ಲಾ ಗ್ರಾಹಕರಿಗೂ ಹಾಗೂ ಗೆಳೆಯರಿಗೂ ದಸರಾ ಹಾಗೂ ವಿಜಯದಶಮಿಯ ಶುಭಾಶಯಗಳು**

LOVATO AUTOGAS

ಎಲ್ಲಾ ವಿಧದ ಪೆಟ್ರೋಲ್ ಕಾರುಗಳಿಗೆ ಅಳವಡಿಸಿ ಶೇ 65% ರಷ್ಟು ಉಳಿತಾಯ ಮಾಡಿ

Govt Apporved CNG Retrofitment Center CNG Conversion Kits for All Petrol Vechicles

Save Upto 65% Of Fuel Cost




**ಎಸ್.ವಿ. ಆಟೋಟೆಕ್** (ಸರ್ಕಾರದಿಂದ ಮಾನ್ಯತೆ ಪಡೆದ ಅಳವಡಿಕೆ ಕೇಂದ್ರ) ರಿಂಗ್ ರಸ್ತೆ, ನವೋದಯ ಶಾಲೆ ಹತ್ತಿರ, ಯಲ್ಲಮ್ಮ ನಗರ, ದಾವಣಗೆರೆ.

ವಾಯು ಮಾಲಿನ್ಯ ತಪಾಸಣಾ ಕೇಂದ್ರ ಸಂಪರ್ಕಿಸಿ : ವಿಶ್ವನಾಥ ಬಿ.ಜೆ. 99451 25525, 93807 22272


# ದೇವನಗರಿಯಲ್ಲಿ ಡೀಸೆಲ್ ಶತಕ

**(1ನೇ ಪುಟದಿಂದ)** ಸರ್ಕಾರ ಆಮದು ತೆರಿಗೆ ಹೆಚ್ಚಿಸಿತ್ತು. ಹೀಗಾಗಿ ಬೆಲೆ ಏರಿಕೆಯ ಲಾಭ ಜನರಿಗೆ ತಲುಪಲಿಲ್ಲ. ಏರಿಕೆಯ ಬಿಸಿ ಮಾತ್ರ 2 ವರ್ಷದಿಂದ ತಟ್ಟುತ್ತಲೇ ಇದೆ.

ಲಾಕ್‌ಡೌನ್‌ನಿಂದ ಸರಕು ಸಾಗಣೆ ಮೇಲೆ ಕರಾಳ ಪರಿಣಾಮವಾಗಿತ್ತು. ಇದರಿಂದ ಲಾರಿ ಚಾಲಕರು ಹೊರೆಗೆ ಸಿಲುಕಿದ್ದಾರೆ. ಅದರ ಬೆನ್ನಲ್ಲೇ ಡೀಸೆಲ್ ಬೆಲೆ ಏರಿಕೆಯಾಗಿರುವುದು ಹೊಸ ಹೊರೆ ತಂದಿದೆ.

ದಾವಣಗೆರೆ ಜಿಲ್ಲೆಯಲ್ಲಿ ಕಾರ್ಖಾನೆಗಳ ಸಂಖ್ಯೆಯೂ ಕಡಿಮೆ ಇದೆ. ಭತ್ತ ಹಾಗೂ ಮೆಕ್ಕೆಜೋಳದಂತಹ ಕೃಷಿ ಉತ್ಪನ್ನಗಳೇ ಲಾರಿ ಸಾಗಣೆದಾರರಿಗೆ ಆಧಾರವಾಗಿವೆ. ಹೀಗಾಗಿ ಇಳುವರಿಯ ಸಮಯದಲ್ಲಿ ಮಾತ್ರ ಲಾರಿಗಳ ಬೇಡಿಕೆ ಹೆಚ್ಚಾಗಿ ಕಂಡು ಬರುತ್ತಿದೆ. ವರ್ಷವಿಡೀ ಸಾಗಾಣೆಗೆ ಬೇಡಿಕೆ ಇಲ್ಲದಿರುವುದು ಮತ್ತೊಂದು ತೊಡಕಾಗಿದೆ.

ಡೀಸೆಲ್ 100 ರೂ.ಗಳ ಗಡಿ ದಾಟಿದೆ. ಆದರೂ, ಡೀಸೆಲ್ ದರ 60 ರೂ. ಇದ್ದಾಗ ಪಡೆಯುತ್ತಿದ್ದ ಬಾಡಿಗೆಯನ್ನೇ ಪಡೆಯುತ್ತಿದ್ದೇವೆ ಎಂದು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ತಿಳಿಸಿದ್ದಾರೆ.

ಡೀಸೆಲ್ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಲಾರಿ ನಡೆಸುವುದೇ ಕಷ್ಟವಾಗಿದೆ. ಹೀಗಾಗಿ ಇಡೀ ದೇಶದಲ್ಲಿ 'ಜಿಸ್ಕಾ ಮಾಲ್, ಉಸ್ಕಾ ಹಮಾಲ್' ಎಂಬ ಸೂತ್ರವನ್ನು ಜಾರಿಗೆ ತರುತ್ತಿದ್ದೇವೆ. ಸರಕುಗಳನ್ನು ಮಾರುವವರು ಹಾಗೂ ಖರೀದಿಸುವವರು ತಾವೇ ಹಮಾಲಿ ಖರ್ಚು ನೀಡಬೇಕಿದೆ ಎಂದವರು ಹೇಳಿದ್ದಾರೆ.

ದೇಶದ ಹಲವು ಭಾಗಗಳಲ್ಲಿ ಈಗಾಗಲೇ ಸರಕು ಮಾರುವವರು ಹಾಗೂ ಖರೀದಿಸುವವರೇ ಹಮಾಲಿ ನೀಡಬೇಕೆಂಬ ಸೂತ್ರ ಯಶಸ್ವಿಯಾಗಿದೆ. ದಾವಣಗೆರೆಯಲ್ಲೂ ಶೀಘ್ರದಲ್ಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಡೀಸೆಲ್ ಬೆಲೆ ಏರಿಕೆಯ ಜೊತೆಗೆ ಲೋಡಿಂಗ್ - ಅನ್‌ಲೋಡಿಂಗ್ ವೆಚ್ಚ, ಟೋಲ್ ವೆಚ್ಚ ಹಾಗೂ ವಾಹನಗಳ ವೆಚ್ಚಗಳು ಏರಿಕೆಯಾಗಿವೆ. ಈ ಕಾರಣಕ್ಕಾಗಿ, ಇನ್ನು ಮುಂದೆ ಲೋಡಿಂಗ್ - ಅನ್‌ಲೋಡಿಂಗ್ ವೆಚ್ಚ ಭರಿಸುವವರ ಸರಕುಗಳನ್ನು ಮಾತ್ರ ಸಾಗಣೆ ಮಾಡುವ ನಿರ್ಧಾರಕ್ಕೆ ಬರಲಿದ್ದೇವೆ ಎಂದವರು ಹೇಳಿದ್ದಾರೆ.

### ಬೆಲೆ ಏರಿಕೆ ಬಿಸಿಯಿಂದಾಗಿ 'ಜಿಸ್ಕಾ ಮಾಲ್, ಉಸ್ಕಾ ಹಮಾಲ್' ಎನ್ನುತ್ತಿರುವ ಲಾರಿ ಮಾಲೀಕರು


Reg.No.: DR:DVG:RSR/25770/2000-01 EST : 04.08.2000

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**

"ಶಿವಗೌರಿ", ಮೊದಲನೇ ಮಹಡಿ, ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಹತ್ತಿರ, ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6. ಫೋ : 08192-355150, ಮೊ : 9844833876

**2020-21ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸ್**

ವಿಜಯನಗರ ಕ್ರೆಡಿಟ್ ಕೋ-ಆಫ್ ಸೊಸೈಟಿ ನಿ., ದಾವಣಗೆರೆ ಇದರ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು, **ದಿನಾಂಕ : 29-10-2021ನೇ ಶುಕ್ರವಾರ ಬೆಳಿಗ್ಗೆ 11-30ಕ್ಕೆ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನ, ಎಂ.ಸಿ.ಸಿ. 'ಎ' ಬ್ಲಾಕ್, ರಾಮಕೃಷ್ಣ ಆಶ್ರಮದ ಹತ್ತಿರ, ದಾವಣಗೆರೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜಿ. ಚಲುವಪ್ಪರವರ ಅಧ್ಯಕ್ಷತೆಯಲ್ಲಿ** ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

**ಸಭೆಯ ಕಾರ್ಯಸೂಚಿ**

1) ಪ್ರಾರ್ಥನೆ 2) ಸ್ವಾಗತ 3) ವಾರ್ಷಿಕ ಸಾಮಾನ್ಯಸಭೆಯ ನೋಟೀಸ್ ಓದಿ ದಾಖಲು ಮಾಡುವುದು. 4) ದಿನಾಂಕ : 24-12-2020ರಂದು ನಡೆದ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು. 5) 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು. 6) 2020-21ನೇ ಸಾಲಿನ ಆಡಿಟ್ ಆದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಪರಿಶೀಲಿಸುವುದು ಹಾಗೂ ಲೆಕ್ಕ ಪರಿಶೋಧಕರ ವರದಿ ಪರಿಶೀಲಿಸಿ ಅನುಮೋದಿಸುವುದು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿನ ದೋಷಗಳಿಗೆ ಸಲ್ಲಿಸಿದ ಅನುಪಾಲನಾವರದಿಯನ್ನು ಪರಿಶೀಲಿಸುವುದು. 7) 2020-21ನೇ ಸಾಲಿನ ಲಾಭ ವಿಲೇವಾರಿ ಮಾಡುವುದು. 8) 2020-21ನೇ ಸಾಲಿನ ಆಯ-ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚನ್ನು ಒಪ್ಪುವುದು ಮತ್ತು 2021-22ನೇ ಸಾಲಿನ ಮತ್ತು ಮುಂದಿನ ವಾರ್ಷಿಕ ಮಹಾಸಭೆಯವರೆಗೆ ವಾರ್ಷಿಕ ಆಯ-ವ್ಯಯ ಪತ್ರವನ್ನು ಮಂಜೂರು ಮಾಡುವುದು. 9) 2021-22ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು. 10) ಪ್ರತಿಭಾ ಪುರಸ್ಕಾರ 11) ಸನ್ಮಾನ ಸಮಾರಂಭ 12) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು 13)ಅಧ್ಯಕ್ಷರ ಭಾಷಣ 14) ವಂದನಾರ್ಪಣೆ.

ಸ್ಥಳ : ದಾವಣಗೆರೆ.
ದಿನಾಂಕ : 07-10-2021

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
(ದಯಾನಂದ ದೊಡ್ಡಮನಿ)
ಕಾರ್ಯದರ್ಶಿ



**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001

ದೂ: 080-2558 6520/ 2558 9112 ಫ್ಯಾಕ್ಸ್: 080-2588 6321

ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂಖ್ಯೆ: ಮಾನಿಮಂ/02/ಬಿಎಲ್‌ಡಿ/2021-22/3370 ದಿನಾಂಕ: 07.10.2021

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ**
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್-ನಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

**ಕಾಮಗಾರಿಯ ಹೆಸರು:** ದಾವಣಗೆರೆಯಲ್ಲಿರುವ, ಮಂಡಳಿಯ ಪ್ರಾದೇಶಿಕ ಕಚೇರಿಯ, ಪ್ರಯೋಗಾಲಯ ಕಟ್ಟಡಕ್ಕೆ ತುರ್ತು ಅಗ್ನಿ ದರಂತದಿಂದ ಹೊರಹೋಗಲು ಮೆಟ್ಟಿಲುಗಳನ್ನು ನಿರ್ಮಾಣ ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: **ರೂ. 16.05 ಲಕ್ಷಗಳು.**

ಹೆಚ್ಚಿನ ಮಾಹಿತಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:

**http://www.eproc.karnataka.gov.in.**ಗೆ ಭೇಟಿ ನೀಡುವುದು.

ಸಹಿ/-
ಸದಸ್ಯ ಕಾರ್ಯದರ್ಶಿ

ವಾ.ಸಾ.ಸಂ.ಇ/1851/2021-22

**ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ




ಸರಸ್ವತಿ ಅಲಂಕಾರದಲ್ಲಿ ನಗರ ದೇವತೆ



ಕನ್ನಿಕಾ ಪರಮೇಶ್ವರಿಗೆ ಕಾತ್ಯಾಯಿನಿ ಅಲಂಕಾರ



ಶಾಮನೂರಿನ ಮಂಗಳಗೌರಮ್ಮ ದೇವಿಗೆ ಕಾಳಿದೇವಿ ಅಲಂಕಾರ



ವಿಶೇಷ ಅಲಂಕಾರದಲ್ಲಿ ಕೆಟಿಜೆ ನಗರದ ತುಳಜಾ ಭವಾನಿ



ವಿಶೇಷ ಅಲಂಕಾರದಲ್ಲಿ ದೊಡ್ಡಪೇಟೆಯ ದಾನಮ್ಮ ದೇವಿ




ವೀಣಾಪಾಣಿಯಾಗಿ ಬಿಎಸ್ಸಿ ರಸ್ತೆಯ ಶ್ರೀ ಕಾಳಿಕಾದೇವಿ



ಉಚ್ಚಂಗಿದುರ್ಗದ ಉಚ್ಚೆಂಗೆಮ್ಮ ದೇವಿಗೆ ತರಕಾರಿ ಅಲಂಕಾರ



ಎಸ್‌ಓಜಿ ಕಾಲೋನಿ ಚೌಡೇಶ್ವರಿಗೆ ತೆಂಗಿನ ಕಾಯಿ ಪೂಜಾ ಅಲಂಕಾರ



ಕುಂಬಾರಪೇಟೆ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಸರಸ್ವತಿ ಅಲಂಕಾರ

# ಕಮಲಾಪುರ, ಯಲವಟ್ಟಿ ಗ್ರಾಮಗಳಲ್ಲಿ 180 ಮನೆಗಳಿಗೆ ನೀರು : ಭತ್ತ ಜಲಾವೃತ

## ತುಂಬಿ ಹರಿದ ಸಿರಿಗೆರೆ, ಯಲವಟ್ಟಿ ಕೆರೆಗಳು ; ಕೊಮಾರನಹಳ್ಳಿ ಕೆರೆ ಭರ್ತಿಗೆ 2 ಅಡಿ ಬಾಕಿ

ಮಲೇಬೆನ್ನೂರು, ಅ.12- ಸೋಮವಾರ ಸಂಜೆಯಿಂದ ಸುಮಾರು 3-4 ತಾಸು ಸುರಿದ ಚಿತ್ತಾ ಮಳೆಯಿಂದಾಗಿ ಯಲವಟ್ಟಿ, ಕಮಲಾಪುರ, ಭಾನುವಳ್ಳಿ ಮತ್ತಿತರೆ ಗ್ರಾಮಗಳಲ್ಲಿ ಅಸ್ತವ್ಯಸ್ತಗೊಂಡಿದ್ದ ಜನಜೀವನ ಸಹಜ ಸ್ಥಿತಿಗೆ ಬರಲು 2-3 ದಿನ ಬೇಕು.

ಯಲವಟ್ಟಿ ಮತ್ತು ಕಮಲಾಪುರ ಗ್ರಾಮಗಳಲ್ಲಿ ಮಳೆ ನೀರು, ಭತ್ತದ ಗದ್ದೆಗಳ ಮೂಲಕ ಹರಿದ ಪರಿಣಾಮ ಎರಡೂ ಗ್ರಾಮಗಳಲ್ಲಿ 180 ಮನೆಗಳಿಗೆ ನೀರು ನುಗ್ಗಿ ಹೆಚ್ಚಿನ ತೊಂದರೆ ಉಂಟು ಮಾಡಿದೆ.

ಮನೆಯಲ್ಲಿದ್ದ ಅಕ್ಕಿ, ಜೋಳ, ಬಟ್ಟೆ ಸೇರಿದಂತೆ, ಇತರೆ ಸಾಮಾನುಗಳು ನೀರಿನಲ್ಲಿ ಮುಳುಗಿದ್ದ ಕಾರಣ ಅವೆಲ್ಲವನ್ನು ಮಂಗಳ ವಾರ ಬಿಸಿಲಿನಲ್ಲಿ ಒಣಗಿಸಿದರು. ಮನೆ ಒಳಗಡೆ ನುಗ್ಗಿದ್ದ ನೀರನ್ನು ಮಗೆದು ಹೊರ ಹಾಕುವ ದೃಶ್ಯ ಸಾಮಾನ್ಯವಾಗಿತ್ತು. ತಗ್ಗು ಪ್ರದೇಶಗಳಲ್ಲಿರುವ ಈ ಮನೆಗಳ ಬಳಿ ಚರಂಡಿಗಳು ಸಣ್ಣದಾಗಿದ್ದರಿಂದ ನೀರು ಮನೆಯೊಳಗೆ ನುಗ್ಗಿತು. ಇದರಿಂದಾಗಿ ರಾತ್ರಿಯಿಡೀ ಬಹಳ ಕಷ್ಟಪಡುವಂತಾಯಿತು. ಗ್ರಾಮಗಳಲ್ಲಿ ಖಾಲಿ ಇದ್ದ ಸಮುದಾಯ ಭವನ, ಅಂಗನವಾಡಿ, ಶಾಲೆಗಳಲ್ಲಿ ನೀರು ನುಗ್ಗಿದ ಮನೆಗಳ ಕುಟುಂಬದವರಿಗೆ ಆಶ್ರಯ ಕಲ್ಪಿಸಿ, ರಾತ್ರಿಯೇ ಅವರಿಗೆ ಊಟ ತಯಾರಿಸಿ ಕೊಡಲಾಯಿತೆಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ 'ಜನತಾವಾಣಿ' ಗೆ ತಿಳಿಸಿದ್ದಾರೆ.

ಯಲವಟ್ಟಿಯಲ್ಲಿ ಮನೆಗಳಿಗೆ ನೀರು ನುಗ್ಗಿದ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ರಾಮಚಂದ್ರಪ್ಪ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಸುಭಾನಿ, ಪಿಡಿಓ ರಾಮನಗೌಡ ಅವರು, ವಾಸನ ಗ್ರಾಮದಿಂದ ಜೆಸಿಬಿ ಕರೆಸಿಕೊಂಡು,





ರಸ್ತೆ ಕಿತ್ತು ಮಳೆ ನೀರು ಹೊರ ಹೋಗುವಂತೆ ಮಾಡಲು ಶ್ರಮಿಸಿದರೆಂದು ಗ್ರಾ.ಪಂ. ಅಧ್ಯಕ್ಷ ಕಮಲಾಪುರದ ಮಲ್ಲಿಕಾರ್ಜುನಪ್ಪ, ಎ. ರಾಮಚಂದ್ರಪ್ಪ, ರಾಜೇಶ್ ಗೌಡ, ಪಿಎಸಿಎಸ್ ಸಿಇಓ ಶೇಖರಪ್ಪ ಶ್ಲಾಘಿಸಿದರು.

ಯಲವಟ್ಟಿಯಲ್ಲಿ ಕೆರೆ ತುಂಬಿ ಹರಿದ ಪರಿಣಾಮ ಕೆರೆಯ ಕೆಳ ಭಾಗದಲ್ಲಿರುವ ಸುಮಾರು 100 ಎಕರೆ ಭತ್ತದ ಬೆಳೆ ಜಲಾವೃತಗೊಂಡಿದೆ. ಕಮಲಾಪುರದಲ್ಲಿ 100 ಮತ್ತು ಯಲವಟ್ಟಿಯಲ್ಲಿ 80 ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿರುವುದಲ್ಲದೆ, 15 ವಾಸದ ಮನೆಗಳು ಕುಸಿದು ಬಿದ್ದಿವೆ. ಈ ಸ್ಥಳಗಳಿಗೆ ಮಂಗಳವಾರ ಬೆಳಿಗ್ಗೆ ಭೇಟಿ ನೀಡಿದ ಉಪ ವಿಭಾಗಾಧಿಕಾರಿ ಶ್ರೀಮತಿ ಮಮತ ಹೊಸ ಗೌಡರ್ ಹಾನಿ ಪರಿಶೀಲಿಸಿ, ನೊಂದವರಿಗೆ ಸಾಂತ್ವನ ಹೇಳಿ, ನೆರವಿನ ಭರವಸೆ ನೀಡಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಇದೇ ವೇಳೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪ್ರಕೃತಿ ವಿಕೋಪದಿಂದ ಆಗಿರುವ ಹಾನಿಯನ್ನು ವಿಶೇಷ ಪ್ರಕರಣ ವೆಂದು ಪರಿಗಣಿಸಿ, ಕೂಡಲೇ ಪರಿಹಾರ ನೀಡಲು ಉಪವಿಭಾಗಾಧಿಕಾರಿ, ತಹಶೀಲ್ದಾರ್ ಅವರನ್ನು ಒತ್ತಾಯಿಸಿದರು.

### ಹಾನಿ ಸ್ಥಳಗಳಿಗೆ ಎ.ಸಿ. ಮಮತ ಹೊಸಗೌಡರ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಭೇಟಿ

ಉಪ ತಹಶೀಲ್ದಾರ್ ಆರ್. ರವಿ, ಗ್ರಾ. ಪಂ. ಅಧ್ಯಕ್ಷ ಮಲ್ಲಿಕಾರ್ಜುನಪ್ಪ, ಉಪಾಧ್ಯಕ್ಷ ಈರಣ್ಣನಾಯ್ಕ, ಗ್ರಾ.ಪಂ. ಸದಸ್ಯ ಸಿದ್ದೇಶ್, ಮುಖಂಡರಾದ ಡಿ.ಹೆಚ್. ಚನ್ನಬಸಪ್ಪ, ಅನಂತ್ ನಾಯ್ಕ, ಕೊಟ್ರೇಶ್ ನಾಯ್ಕ, ಕಂದಾಯ ನಿರೀಕ್ಷಕ ಆನಂದ್, ಪಿಡಿಓ ರಾಮನಗೌಡ, ಗ್ರಾಮ ಲೆಕ್ಕಾಧಿಕಾರಿ ಸುಭಾನಿ, ಪ್ರೊಬೇಷನರಿ ಪಿಎಸ್‌ಐ ಪಾಂಡುರಂಗ, ಗ್ರಾಮ ಸಹಾಯಕ ರಂಗನಾಥ್ ಹಾಗೂ ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

ಹೊಳೆಸಿರಿಗೆರೆಯಲ್ಲೂ ಕೆರೆ ತುಂಬಿ ಕೋಡಿ ಬಿದ್ದಿದ್ದು, ಹೆಚ್ಚಿನ ಅನಾಹುತ ತಪ್ಪಿಸಲು ಗ್ರಾಮಸ್ಥರು ಜೆಸಿಬಿ ಮೂಲಕ ಮೀನು ಹಿಡಿಯಲು ಹಾಕಿದ್ದ ಜಾಲರಿಯನ್ನು ತೆರವುಗೊಳಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿಶಾಪ ಹಾಕಿದರು.

**ಮನೆಗಳಿಗೆ ಹಾನಿ:** ಭಾನುವಳ್ಳಿಯಲ್ಲಿ 15, ಬೆಳ್ಳೂಡಿಯ ಹೆಚ್. ಶಿವಪ್ಪ ಬಡಾವಣೆಯಲ್ಲಿ 15, ರಾಜಗೊಂಡರ ಕಾಲೋನಿಯಲ್ಲಿ 30, ಎ.ಕೆ. ಕಾಲೋನಿಯಲ್ಲಿ 15 ಮನೆಗಳಿಗೆ ನೀರು ನುಗ್ಗಿದೆ, ಹುಲುಗಿನ ಹೊಳೆಯಲ್ಲಿ 2, ಯಲವಟ್ಟಿಯಲ್ಲಿ 5, ಕಮಲಾಪುರದಲ್ಲಿ 10, ಬೂದಿಹಾಳ್, ಎಳೆಹೊಳೆ, ಧೂಳೆಹೊಳೆ ಗ್ರಾಮಗಳಲ್ಲಿ ತಲಾ 1 ಮನೆಗಳಿಗೆ ಭಾಗಶಃ ಹಾನಿಯಾಗಿದೆ ಎಂದು ತಹಶೀಲ್ದಾರ್ ರಾಮಚಂದ್ರಪ್ಪ ತಿಳಿಸಿದರು.

ಹೊಸಪಾಳ್ಯದಲ್ಲಿ 50 ಎಕರೆ ಮತ್ತು ಜಿಗಳಿಯಲ್ಲಿ 30 ಎಕರೆ ಭತ್ತದ ಬೆಳೆ ಜಲಾವೃತಗೊಂಡಿದ್ದು, ಹರಿಹರ ತಾಲ್ಲೂಕಿನಲ್ಲಿ ಒಟ್ಟು 200 ಮಿಲಿ ಮೀಟರ್ ಮಳೆ ಆಗಿದೆ ಎಂದು ವರದಿಯಾಗಿದೆ. ದೇವರ ಬೆಳಕೆರೆ ಪಿಕಪ್ ಡ್ಯಾಂನಿಂದ ಭಾರೀ ಪ್ರಮಾಣದ ನೀರು ಹೊರಬರುತ್ತಿದ್ದು, ಬ್ಯಾಲದಹಳ್ಳಿ ಹಳ್ಳ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ. ಸೋಮವಾರ ರಾತ್ರಿ ಸುರಿದ ಮಳೆಯಿಂದ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಕೆರೆಗೂ 1 ಅಡಿಯಷ್ಟು ನೀರು ಹರಿದು ಬಂದಿದ್ದು, ಕೆರೆ ಕೋಡಿ ಬೀಳಲು ಎರಡೂವರೆ ಅಡಿ ನೀರು ಬೇಕು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

# ಸೆಪ್ಟೆಂಬರ್‌ನಲ್ಲಿ ಹಣದುಬ್ಬರ ಶೇ.4.35ಕ್ಕೆ ಇಳಿಕೆ

ನವದೆಹಲಿ, ಅ. 12- ಸೆಪ್ಟೆಂಬರ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರ ಶೇ.4.35ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ಗ್ರಾಹಕ ಬೆಲೆ ಸೂಚ್ಯಂಕ ಆಧರಿತ ಹಣದುಬ್ಬರ ಆಗಸ್ಟ್ ತಿಂಗಳಲ್ಲಿ ಶೇ.5.30 ಮತ್ತು 2020ರ ಸೆಪ್ಟೆಂಬರ್‌ನಲ್ಲಿ 7.27ರಷ್ಟಿದೆ.

ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿಯ ಮಾಹಿತಿ ಯ ಪ್ರಕಾರ ಆಹಾರ ವಿಭಾಗದ ಹಣದುಬ್ಬರ ಶೇ.0.68 ರಷ್ಟಿದೆ. ಇದು ಆಗಸ್ಟ್ ತಿಂಗಳಲ್ಲಿ ಶೇ.3.11 ಆಗಿತ್ತು.




ನವರಾತ್ರಿ ಪ್ರಯುಕ್ತ ಮಂಗಳವಾರ ನಗರದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಶ್ರೀ ಕಾಳಿಕಾದೇವಿ ಮಹಿಳಾ ಭಜನಾ ಮಂಡಳಿಯವರಿಂದ ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ನಡೆಯಿತು.


ನಮ್ಮೆಲ್ಲಾ ಗ್ರಾಹಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಪ್ರಯುಕ್ತ

ಭಾರೀ ರಿಯಾಯಿತಿ ದರದಲ್ಲಿ ಮಾರಾಟ

ದಿನಾಂಕ 14.10.2021 ರಿಂದ 24.10.2021 ರವರೆಗೆ ಮಾತ್ರ



ನಂದಿ ಇಂಟೀರಿಯರ್ಸ್ & ಡಿಸೈನರ್ಸ್

Exclusive Interior Designers For Your Fantasy

NANDI INTERIORS & DESIGNERS

# 596 JAGALUR ROAD, YELEBETHUR VILLAGE, DAVANGERE.

+91 96202 31800, /01/02/03/04, 08192 297288, web www.nandiinteriorsanddesigner.com


# ನಿಟುವಳ್ಳಿ ದುರ್ಗಾಂಬಿಕಾ ದೇವಿಗೆ ಪ್ರಭಾ ಎಸ್ಸೆಸ್ಸೆಂ ಪೂಜೆ



ದಾವಣಗೆರೆ, ಅ. 12 - ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ ನಡೆಯುತ್ತಿದ್ದು, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀಮತಿ ಪ್ರಭಾ ಶಾಮನೂರು ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ ದೇವಸ್ಥಾನಕ್ಕೆ ಭೇಟಿ ನೀಡಿ, ಶ್ರೀ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಹೆಚ್.ಬಿ. ಮಂಜುನಾಥ್, ನಗರ ಪಾಲಿಕೆ ಸದಸ್ಯರುಗಳಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನಿ, ಶ್ರೀಮತಿ ಆಶಾ ಉಮೇಶ್, ಶ್ರೀಮತಿ ಮೀನಾಕ್ಷಿ ಜಗದೀಶ್, ಶ್ರೀಮತಿ ಸುಧಾ ಇಟ್ಟಿಗುಡಿ ಅವರುಗಳು ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶ್ರೀ ದೇವಿಯ ದರ್ಶನ ಪಡೆದರು.

ನಿಟುವಳ್ಳಿಯ ಮುಖಂಡರುಗಳಾದ ಹುಲ್ಲುಮನಿ ಕೃಷ್ಣ, ಹೊಳಚ್ಚಿ ರುದ್ರೇಶ್, ಸುರೇಶ್, ಕಣಸಪ್ಪರ ಮಂಜುನಾಥ್, ಹಾಲೇಶ್, ಕಾಂಗ್ರೆಸ್ ಮುಖಂಡರುಗಳಾದ ಗಣೇಶ್ ಹುಲ್ಲುಮನಿ, ಮಂಜುನಾಥ ಇಟ್ಟಿಗುಡಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## 16 ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಹೀರಾಬಾಯಿ ಯಂಕಾನಾಯಕ್**

ಪುಣಭಗಟ್ಟ, ಹರಪನಹಳ್ಳಿ ತಾಲ್ಲೂಕು

ನೀವು ನಮ್ಮನ್ನಗಲಿ 13.10.2021ರ ಈ ದುರ್ಗಾಷ್ಟಮಿಗೆ 16 ವರ್ಷಗಳು ಕಳೆದಿವೆ.

ಸದಾ ನಿಮ್ಮ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಶ್ರೀಮತಿ ಉಷಾ ಕಾಶೀನಾಥ್, ಅಧ್ಯಕ್ಷರು

ಶ್ರೀ ವೈ. ಕಾಶೀನಾಥ್, ಕಾರ್ಯದರ್ಶಿಗಳು ಹಾಗೂ ಕಾರ್ಯಕಾರಿ ಮಂಡಳಿ

ಶ್ರೀ ವೆಂಕಟೇಶ್ವರ ವಿದ್ಯಾಸಂಸ್ಥೆ (ರಿ.) ಪುಣಭಗಟ್ಟೆ.

ಜತಿನ್ ಕೆ. ಸೋನೆ, ಕೌಶಿಕ್ ಕೆ. ಸೋನೆ

ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಬಂಧುಗಳು

ಹಾಗೂ ಪ್ರಾಂಶುಪಾಲರು & ಸಿಬ್ಬಂದಿ SHY PU ಕಾಲೇಜ್, ಗುಂಡಗತ್ತಿ

ಮುಖ್ಯ ಶಿಕ್ಷಕರು & ಸಿಬ್ಬಂದಿ ಶ್ರೀ ದುರ್ಗಾಂಬಿಕ ಪ್ರೌಢಶಾಲೆ, ಚಿಕ್ಕಮೇಗಳಗೆರೆ.

ಶ್ರೀ ವೆಂಕಟೇಶ್ವರ ಪ್ರೌಢಶಾಲೆ, ಗುಂಡಗತ್ತಿ, ಫೋ. : 8095266555


## Congrats MDRT USA 2021 Award 16th yr. in a Row

(History in Mid & North Karnataka in Life Insurance Sector)






Congratulations to awardee Legend LEAD BASAVARAJU

ದಾವಣಗೆರೆ ಆಂಜನೇಯ ಬಡಾವಣೆ, ಲೀಡ್ ಆಟೋಸ್ ಮತ್ತು ಲೀಡ್ ಫೈನಾನ್ಸಿಯಲ್ ಇನ್‌ವೆಸ್ಟ್‌ಮೆಂಟ್ ಮಾಲೀಕರಾದ

**SRI G.C. BASAVARAJU**

LUTCF, NCFM, MDRT, IIM (MDP)

ಇವರು ಜೀವವಿಮಾ ರಂಗದಲ್ಲಿ ಸಾಧನೆಗೈದು ಫೈನಾನ್ಸಿಯಲ್ ಅಡ್ವೈಸರ್‌ಗಳಿಗೆ ನೀಡುವ ವಿಶ್ವದರ್ಜೆಯ ಶ್ರೇಷ್ಠ ಪ್ರಶಸ್ತಿ MDRT USA Award ಅನ್ನು ಸತತವಾಗಿ 16ನೇ ಬಾರಿಗೆ ಪಡೆದಿರುತ್ತಾರೆ. ಇವರುಗಳ ಅತ್ಯುತ್ತಮ ಸೇವೆ, ಮಾಹಿತಿ ತಂತ್ರಜ್ಞಾನ ಮತ್ತು ಟ್ಯಾಕ್ಸ್ ಪ್ಲಾನಿಂಗ್‌ಗಳನ್ನು ಗ್ರಾಹಕರಿಗೆ ಮನದಟ್ಟು ಮಾಡಿಕೊಟ್ಟು ಗ್ರಾಹಕರ ಸ್ನೇಹಿಯಾಗಿರುವ ಇವರಿಗೆ ಭಾರತದ AAA+ Rated ವಿಮಾ ಕಂಪನಿಗಳಲ್ಲೊಂದಾದ ಐಸಿಐಸಿಐ ಪ್ರುಡೆನ್ಷಿಯಲ್ ಲೈಫ್ ಇನ್ಸೂರೆನ್ಸ್ ಕಂಪನಿಯಲ್ಲಿ CEO Award ಪಡೆದು ಸೀನಿಯರ್ ಟೈಟಾನಿಯಮ್ ಅಡ್ವೈಸರ್ ಆಗಿ ಕೀರ್ತಿ ಪಡೆದು ದಾವಣಗೆರೆ ಶಾಖೆಗೆ ಯಶಸ್ಸು ತಂದಿರುವ ಇವರಿಗೆ

ಹಾರ್ದಿಕ ಅಭಿನಂದನೆಗಳು.

**Professional Achievements :** * ICICI 2006 MDRT Awardee * ICICI 2008, 2009, 2010, 2015, 2016, 2017 COT Awardee * ICICI Sr. Titanium CEO Awardee Since 2006 * 18 Times Travelled International Conference Award Ceremony for wealth & Health Management * 2007 Australia, Malaysia, * 2008 Singapore * 2009 Dubai, Italy, China * 2010 Turkey, Cappadocia (Turkey) * 2011 Mascow-St.Petersburg, * 2012 Spain * 2013 Geremany *2014 London/Scotland * 2015 Paris/France * 2016 Prague/Budapest/ Hungeri * 2017 Netherlands / Belgium * 2018 Vienna, Austria * 2019 Singapore * ICICI Sponsored of Financial Markets (NCFM) and CIFA CERTIFICATION

**Business Overview :** No. of Customers 1100+as On 30th Sep. 2021, Total Sum Assured 250 Crores, Asset Under Management Rs. 50 Crores as on 30th Sep. 2021

**Business Belief :** I Believe in Advising the Investment Policy Benefits with need based solutions and providing quality services to the customers along with regular feedback with tax planning.

**Best Wishes from :**

Renugopal T. V., Associated Vice President
Sadananda G. Sakre, Area Manager
Raghavendra H.K., Senior Agency Manager
Deepak Murdeshwar, Operations - Senior Associate
UNIT MANAGERS AND BRANCH STAFF
ICICI Prudential Life Ins. Co. Ltd.
Opp. Aruna Talkies, P.B. Road, Davangere-02


# 1.95 ದಶಲಕ್ಷ ಟನ್ ಕಲ್ಲಿದ್ದಲು ಪೂರೈಕೆ

ನವದೆಹಲಿ, ಅ 12 – ಕಲ್ಲಿದ್ದಲು ಬೇಡಿಕೆ ಈಡೇರಿಸಲು ಸರ್ಕಾರ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದೆ. ಪ್ರಸಕ್ತ ದಿನಕ್ಕೆ 1.95 ದಶಲಕ್ಷ ಟನ್ ಕಲ್ಲಿದ್ದಲು ಪೂರೈಸುತ್ತಿದ್ದು, ಅದನ್ನು 2 ದಶಲಕ್ಷ ಟನ್‌ಗಳಿಗೆ ಹೆಚ್ಚಿಸಲಾಗು ವುದು ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

ಕೋಲ್ ಇಂಡಿಯಾ ಬೇಡಿಕೆ ಈಡೇರಿಕೆಗೆ ಎಲ್ಲ ಪ್ರಯತ್ನಗಳನ್ನು ನಡೆಸುತ್ತಿವೆ. ನಿನ್ನೆ ನಾವು 1.95 ದಶಲಕ್ಷ ಟನ್ ಕಲ್ಲಿದ್ದಲು ಪೂರೈಸಿದ್ದೇವೆ. ಇದು ಭಾರತದ ಇತಿಹಾಸದಲ್ಲೇ ಅತಿ ಹೆಚ್ಚಿನ ಪೂರೈಕೆ ಎಂದು ಸಚಿವರು ಹೇಳಿದ್ದಾರೆ.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte